ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರ್ಗಿ, ಬಳ್ಳಾರಿ, ವಿಜಯನಗರ, ಬೀದರ, ಏಕಕಾಲಕ್ಕೆ ಪ್ರಕಟಣೆ
Raichur, Koppal, Yadagiri, Kalburgi, Ballary, Vijaya Nagar, Bidar

ಕನ್ನಡ ಮಾತೃಭೂಮಿ
ಕನ್ನಡದಿನ ಪತ್ರಿಕೆ
ರಾಯಚೂರಿನಿಂದ ರಾಜ್ಯದವರೆಗೆ

ಸಂಪಾಕದರು : ಶ್ಯಾಮ್ ಸುಂದರ್.ಎಲ್
EDITOR : SHYAM SUNDER L

KANNADA MATHRUBHOOMI
KANNADA DAILY PAPER

mathrubhoomircr@gmail.com
Call : 9886635117

ಸಂಪುಟ : Volume : 03 | ಸಂಚಿಕೆ Issue : 155 | ದಿನಾಂಕ : 05-04-2026 Date : 05-04-2026 | ರವಿವಾರ Sunday | RNI: Karkan/2023/89199 Post Reg No.: RCR/L/RNP/98/2025-2027 | ರಾಯಚೂರು Raichur | ಪುಟ : Pages : 04 | ರೂ Rs. 2

### ಎನ್‌ಟಿಆರ್ ಪುತ್ಥಳಿ ಲೋಕಾರ್ಪಣೆಗೊಳಿಸಿದ ಹೆಚ್‌ಡಿಕೆ

# ಆಂಧ್ರ ಜನತೆಗೆ ಕರ್ನಾಟಕ ತಾಯಿ ಇದ್ದಂತೆ-ನಾರಾ ಲೋಕೇಶ



■ ಕನ್ನಡ ಮಾತೃ ಭೂಮಿ ವಾರ್ತೆ

**ಸಿಂಧನೂರು,ಏ.4**-ದಶಕಗಳ ಹಿಂದೆ ಆಂಧ್ರಪ್ರದೇಶದಿಂದ ಬಂದು ಇಲ್ಲಿ ನೆಲೆಸಿದ ಜನತೆಗೆ ಕರ್ನಾಟಕ ತಾಯಿ ಇದ್ದಂತೆ. ತಾಯಿ ಭುವನೇಶ್ವರಿಯ ಮಮತೆಯಲ್ಲಿ ಆಂಧ್ರಪ್ರದೇಶದವರು ಇಲ್ಲಿ ಬದುಕುತ್ತಿದ್ದಾರೆ ಎಂದು ಆಂಧ್ರಪ್ರದೇಶದ ಐಟಿ ಮತ್ತು ಶಿಕ್ಷಣ ಇಲಾಖೆ ಸಚಿವ ನಾರಾ ಲೋಕೇಶ್ ಹೇಳಿದರು.

ಅವರು ಶನಿವಾರ ನಗರದ ಕಮ್ಮವಾರಿ ಕಲ್ಯಾಣ ಮಂಟಪದಲ್ಲಿ ಎನ್ ಟಿ ರಾಮರಾವ್ ಅವರ ಪುತ್ಥಳಿ ಅನಾವರಣಗೊಳಿಸಿ ನಂತರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದರು. ಕರ್ನಾಟಕದ ಮಣ್ಣಿನ ಋಣ ತೀರಿಸಲು ನಾನು ಇಲ್ಲಿಗೆ ಬಂದಿದ್ದೇನೆ. 1970ರ ದಶಕದಲ್ಲಿ ಕರ್ನಾಟಕಕ್ಕೆ ವಲಸಿಗರಾಗಿ ಬಂದು ಇಲ್ಲಿ ನೆಲೆಸಿದ ಆಂಧ್ರಪ್ರದೇಶದ ಜನತೆಗೆ ಕರ್ನಾಟಕ ಎಲ್ಲ ರೀತಿಯ ಸೌಕರ್ಯ ನೀಡುವ ➘2

**ಕುಮಾರಸ್ವಾಮಿಯನ್ನ ಹಾಡಿಹೊಗಳಿದ ಆಂಧ್ರಪ್ರದೇಶದ ಸಚಿವ ನಾರಾ ಲೋಕೇಶ...**

ದೇವೆಗೌಡರ ಕುಟುಂಬಕ್ಕೆ ಹಾಗೂ ನಮ್ಮ ಅವಿನಾಭಾವ ಸಂಬಂಧವಿದೆ. ಚಂದ್ರಬಾಬು ನಾಯ್ಡು ಮತ್ತು ದೇವೆಗೌಡರು ಕೇಂದ್ರದಲ್ಲಿ ಕೆಲಸ ಮಾಡಿದ್ದಾರೆ. ಈಗ ನಾನು ಮತ್ತು ಕುಮಾರಸ್ವಾಮಿಯವರು ಜೊತೆ ಜೊತೆಯಾಗಿ ಕೆಲಸ ಮಾಡುತ್ತಿದ್ದೇವೆ. ಮಾಜಿ ಮುಖ್ಯಮಂತ್ರಿ ಜಗನ್ ಮೋಹನ್ ಸರಕಾರದಲ್ಲಿ ವೈಜಾಕ್ ಸ್ಟೀಲ್ ಪ್ಯಾಕ್ಟರಿ ಮುಚ್ಚಿಹಾಕಲಾಗಿತ್ತು. ಕೇಂದ್ರದಲ್ಲಿ ಕುಮಾರಸ್ವಾಮಿ ಮಂತ್ರಿಯಾದ ಮೇಲೆ ವಿಶೇಷ ಕಾಳಜಿವಹಿಸಿ ಮತ್ತೆ ಪುರಾರಂಭಿಸಿದರು. ಗ್ರೀನ್ ಪೀಲ್ಡ್, ಗ್ರೀನ್ ಕಂಪನಿ ಆಂಧ್ರಪ್ರದೇಶದಕ್ಕೆ ಬರಲು ಕುಮಾರಸ್ವಾಮಿ ಕಾರಣ ಎಂದು ತಮ್ಮ ಭಾಷಣದುದ್ದಕ್ಕೂ ಕುಮಾರಸ್ವಾಮಿ ಹಾಡಿಹೊಗಳಿದರು.

**ವಿಶೇಷ ಆಸನ ತೆಗೆಯಿಸಿ ಸರಳತೆ ಮೆರೆದ ನಾರಾ ಲೋಕೇಶ... ಜನತೆಯ ಜೈಕಾರ...**

ಪುತ್ಥಳಿ ಅನಾವರಣ ಹಿನ್ನಲೆಯಲ್ಲಿ ಆಯೋಜಿಸಿದ್ದ ವೇದಿಕೆಯಲ್ಲಿ ನಾರಾ ಲೋಕೇಶ ಅವರಿಗೆ ವಿಶೇಷ ಆಸನದ ವ್ಯವಸ್ಥೆ ಮಾಡಲಾಗಿತ್ತು. ಇನ್ನಿತರ ಗಣ್ಯರಿಗೆ ಬೇರೆ ಆಸನಗಳನ್ನು ಹಾಕಿಸಲಾಗಿತ್ತು. ವಿಶೇಷ ಆಸನದಲ್ಲಿ ಕುಮಾರಸ್ವಾಮಿ ಅವರನ್ನು ಕುಳಿತುಕೊಳ್ಳಲು ನಾರಾ ಲೋಕೇಶ ಒತ್ತಾಯಿಸಿದರು. ಕುಮಾರಸ್ವಾಮಿ ನಿರಾಕರಿಸಿದ ಹಿನ್ನಲೆ ತಾವು ಸಹ ಆ ವಿಶೇಷ ಆಸನದಲ್ಲಿ ಕುಳಿತುಕೊಳ್ಳದೇ ಆ ಆಸನವನ್ನು ತೆಗೆಯಿಸಿ, ಸಾಧಾರಣ ಖುರ್ಚಿಯಲ್ಲಿ ಕುಳಿತುಕೊಳ್ಳುವ ಮೂಲಕ ಸರಳತೆ ಮರೆದರು. ವೇದಿಕೆಯ ಮುಂಭಾಗದಲ್ಲಿದ್ದವರೂ ಆ ಕ್ಷಣ ನಾರಾ ಲೋಕೇಶ ಸರಳತೆ ಮೆಚ್ಚಿ ಅವರ ಪರ ಜೈಕಾರ ಹಾಕಿ, ಘೋಷಣೆಗಳನ್ನು ಕೂಗಿದ ಪ್ರಸಂಗ ನಡೆಯಿತು.

# ಕುಮಾರಸ್ವಾಮಿ, ನಾರಾ ಲೋಕೇಶ ಅದ್ದೂರಿ ಸ್ವಾಗತ: ಭರ್ಜರಿ ರೋಡ್ ಶೋ



■ ಕನ್ನಡ ಮಾತೃ ಭೂಮಿ ವಾರ್ತೆ

**ಸಿಂಧನೂರು,ಏ.4**-ಸೈನಿಕ ಶಾಲೆ ಉದ್ಘಾಟನೆ, ಎನ್ ಟಿ ಆರ್ ಅವರ ಪುತ್ಥಳಿ ಅನಾವರಣಗೊಳಿಸಲು ಭಾನುವಾರ ನಗರಕ್ಕಾಗಮಿಸಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಆಂಧ್ರಪ್ರದೇಶದ ಸರಕಾರದ ಸಚಿವ ನಾರಾ ಲೋಕೇಶ ಅವರಿಗೆ ಅದ್ದೂರಿ ಸ್ವಾಗತ ಕೋರಲಾಯಿತು.

ಸಿಂಧನೂರು ನಗರದ ಪಿಡಬ್ಲ್ಯೂಡಿ ಕ್ಯಾಂಪಿನಿಂದ ಗಾಂಧಿವೃತ್ತದ ಬೃಹತ್ ಬೈಕ್ ರ್ಯಾಲಿ ನಡೆಸಲಾಯಿತು.

ಗಾಂಧಿವೃತ್ತದಿಂದ ಕಮ್ಮವಾರಿ ಕಲ್ಯಾಣ ಮಂಟಪದವರೆಗೆ ತೆರೆದ ವಾಹನದಲ್ಲಿ ಕುಮಾರಸ್ವಾಮಿ,

ನಾರಾ ಲೋಕೇಶ ಅವರು ಭರ್ಜರಿ ರೋಡ್ ಶೋ ನಡೆಸಲಾಯಿತು.

ದಾರಿಯುದ್ದಕ್ಕೂ ಆಂಧ್ರ ಜನತೆ ಹಾಗೂ ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರು ಹೂವಿನ ಸುರಿಮಳೆಗೈದರು.

ಕೇಂದ್ರದ ರಕ್ಷಣಾ ಖಾತೆಯ ರಾಜ್ಯ ಸಚಿವ ಸಂಜಯ್ ಶೇಠ್, ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಇತರರು ರೋಡ್ ಶೋನಲ್ಲಿ ಪಾಲ್ಗೊಂಡಿದ್ದರು.

# ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲವು-ಕುಮಾರಸ್ವಾಮಿ ವಿಶ್ವಾಸ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.4**-ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ ಪಕ್ಷ ಜನರ ವಿಶ್ವಾಸವನ್ನು ಕಳೆದುಕೊಂಡಿದ್ದು, ಉಪಚುನಾವಣೆಯಲ್ಲಿ ಎರಡು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ, ಕೇಂದ್ರ ಸರಕಾರದ ಸಚಿವ ಹೆಚ್.ಡಿ.ಕುಮಾರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.




ಅವರು ಶನಿವಾರ ಸಿಂಧನೂರು ನಗರದ ಕಮ್ಮವಾರಿ ಕಲ್ಯಾಣ ಮಂಟಪದಲ್ಲಿ ನಡೆದ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಎನ್.ಟಿ.ರಾಮರಾವ್ ಅವರ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಭಾಗವಹಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ರಾಜ್ಯದಲ್ಲಿ ನಡೆಯುತ್ತಿರುವ ಉಪಚುನಾವಣೆ ಎರಡು ಪಕ್ಷಗಳು ಅತ್ಯಂತ ಪ್ರತಿಷ್ಠೆಯಾಗಿ ತೆಗೆದುಕೊಂಡಿವೆ. ಬಿಜೆಪಿ ಹಾಗೂ ➘2

# ಆಟೋ ಚಾಲಕರಿಗೆ 6ನೇ ಗ್ಯಾರಂಟಿ ಕೊಡಿ : ಹೆಚ್.ಡಿ. ಕುಮಾರಸ್ವಾಮಿ ಆಗ್ರಹ

■ ಕನ್ನಡ ಮಾತೃ ಭೂಮಿ ವಾರ್ತೆ

**ಕೊಪ್ಪಳ,ಏ.4**-ರಾಜ್ಯದ ಆಟೋ ಚಾಲಕರಿಗೆ ರಾಜ್ಯ ಸರ್ಕಾರವು 6ನೇ ಗ್ಯಾರಂಟಿಯನ್ನು ಘೋಷಣೆ ಮಾಡಬೇಕು ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದರು.

ಸಿಂಧನೂರಿನ ಹೊಸಹಳ್ಳಿ ಇ.ಜೆ. ಕ್ಯಾಂಪಿನಲ್ಲಿರುವ ಶ್ರೀಕೃಷ್ಣದೇವರಾಯ ವಿದ್ಯಾಸಂಸ್ಥೆಗೆ ಮಂಜೂರಾಗಿರುವ ಸೈನಿಕ ಶಾಲೆಯ ಉದ್ಘಾಟನೆಗೆ ಆಗಮಿಸಿದ ಕೇಂದ್ರ ಸಚಿವ ಕುಮಾರಸ್ವಾಮಿ ಅವರು ತಮ್ಮನ್ನು ಭೇಟಿಯಾದ ಮಾಧ್ಯಮ ಪ್ರತಿನಿಧಿಗಳ ಜತೆ ಮಾತಾಡಿದರು.

ರಾಜ್ಯ ಕಾಂಗ್ರೆಸ್ ಸರ್ಕಾರದ ಕೆಲ ನಾಯಕರು ಕೇಂದ್ರ ಸರ್ಕಾರದ ಮೇಲೆ ಟೀಕೆ ಮಾಡುತ್ತಿದ್ದಾರೆ. ಅದರ ಸಮಾನಂತರವಾಗಿ ಆಟೋ ಚಾಲಕರು ಬಳಸುವ ಇಂಧನದ ಮೇಲೆ ತೆರಿಗೆಯನ್ನು ಈ ಸರ್ಕಾರ ➘2

# ಬಿಸಿಲಿನ ತಾಪಕ್ಕೆ ಮೂಕ ಪ್ರಾಣಿಗಳಿಗೆ ನೀರಿನ ತೊಟ್ಟಿಗಳ ವ್ಯವಸ್ಥೆ




■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.4**- ಸುಡುವ ಬಿಸಿಲಿನ ತಾಪಮಾನ ಹೆಚ್ಚುತ್ತಿರುವ ಹಿನ್ನೆಲೆ, ಮೂಕ ಪ್ರಾಣಿಗಳ ಕಷ್ಟವನ್ನು ಮನಗಂಡು ದಾರಿದೀಪ ಸಂಸ್ಥೆ ವತಿಯಿಂದ ನಗರದ ಹಲವಾರು ರಸ್ತೆ ಬದಿಗಳಲ್ಲಿ ಗೋವುಗಳು ಹಾಗೂ ಬೀದಿ ನಾಯಿಗಳಿಗೆ ಕುಡಿಯುವ ನೀರಿನ ಸಂಗ್ರಹಣೆಗೆ ತೊಟ್ಟಿಗಳ ವ್ಯವಸ್ಥೆ ಮಾಡಲಾಗಿದೆ.

ನಗರದ ವಿವಿಧ ಪ್ರದೇಶಗಳಲ್ಲಿ ನೀರಿಗಾಗಿ ಅಲೆದಾಡುತ್ತಿರುವ ಹಸುಗಳು ಮತ್ತು ಬೀದಿ ನಾಯಿಗಳ ➘2

# ಲಿಂಗತ್ವ ಅಲ್ಪಸಂಖ್ಯಾತರ ತಿದ್ದುಪಡಿ ಕಾಯ್ದೆ ಜಾರಿ ವಿರೋಧಿಸಿ ಲಿಂಗತ್ವ ಅಲ್ಪಸಂಖ್ಯಾತರಿಂದ ಪ್ರತಿಭಟನಾ ರ್‍ಯಾಲಿ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.4**-ಕೇಂದ್ರ ಸರ್ಕಾರ ರೂಪಿಸಲು ಹೊರಟಿರುವ ಟ್ರಾನ್ಸಜೆಂಡರ್ (ಹಕ್ಕುಗಳ ಸಂರಕ್ಷಣಾ) ತಿದ್ದುಪಡಿ ಕಾಯ್ದೆ ಜಾರಿ ವಿರೋಧಿಸಿ ಲಿಂಗತ್ವ ಮತ್ತು ಲೈಂಗಿಕ ಬಹುತ್ವಕ್ಕಾಗಿ ಚಳುವಳಿಯಿಂದ ನಗರದಲ್ಲಿ ಪ್ರತಿಭಟನಾ ರ್‍ಯಾಲಿ ನಡೆಲಾಯಿತು.

ನಗರದ ಬಿಆರ್‌ಬಿ ವೃತ್ತದಿಂದ ಪ್ರಾರಂಬವಾದ ಪ್ರತಿಬಟನಾ ರ್‍ಯಾಲಿ ನಗರದ ವಿವಿಧ ರಸ್ತೆಗಳ ಮೂಲಕ ನಗರ ಡಾ.ಬಿ.ಆರ್.ಅಂಬೇಡ್ಕರ್ ವೃತ್ತಕ್ಕೆ ಆಗಮಿಸಿತು. ರ್‍ಯಾಲಿಯುದ್ದಕ್ಕೂ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಘೋಷಣೆಗಳನ್ನು ಹಾಕಲಾಯಿತು. ಲಿಂಗತ್ವ ಅಲ್ಪಸಂಖ್ಯಾತರ ಸ್ವಾಭಿಮಾನಕ್ಕೆ ಧಕ್ಕೆ ತರುವ ಕಾಯ್ದೆಯನ್ನು ರದ್ದುಪಡಿಸಬೇಕೆಂದು ಆಗ್ರಹಿಸಿದರು. ಲಿಂಗತ್ವ ಅಲ್ಪಸಂಖ್ಯಾತರ ಗುರತೀನ ಸ್ವಯಂ ನಿರ್ಣಯದ ಹಕ್ಕನ್ನು ಕಸಿದುಕೊಳ್ಳುವ ತಿದ್ದುಪಡಿ ಕಾಯ್ದೆ ಸಂವಿಧಾನ ನೀಡಿರುವ ಹಕ್ಕುಗಳ ➘2




# ಬಾಲಕೋಟೆ ವಿಧಾನಸಭೆ ಕ್ಷೇತ್ರ ಉಪಚುನಾವಣೆ

### ಕಾಂಗ್ರೆಸ್ ಅಭ್ಯರ್ಥಿ ಪರ ಆರ್‌ಡಿಎ ಅಧ್ಯಕ್ಷ ರಾಮಸ್ವಾಮಿ ಭರ್ಜರಿ ಪ್ರಚಾರ



**ಬಾಗಲಕೋಟೆ,ಏ.4**-ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಉಮೇಶ ಹುಲ್ಲಪ್ಪ ಮೇಟಿ ಪರವಾಗಿ ರಾಯಚೂರು ನಗರಾಭಿವೃದ್ದಿ ಪ್ರಾಧಿಕಾರದ ಅಧ್ಯಕ್ಷ ರಾಜಶೇಖರ್ ರಾಮಸ್ವಾಮಿ ಅವರು ಬಾಗಲಕೋಟೆ ಪಟ್ಟಣದಲ್ಲಿ ಭರ್ಜರಿ ಪ್ರಚಾರ ನಡೆಸಿದರು.

ಬಾಗಲಕೋಟೆ ಪಟ್ಟಣದ ವಾರ್ಡ್ ನಂ. 17 ರ ಬೂತ್ ನಂಬರ್ 148, 107, 106 ರಲ್ಲಿ ಭರ್ಜರಿ ಮತಭೇಟೆ ನಡೆಸಿದರು. ವಾರ್ಡಿನಲ್ಲಿ ಮನೆ ಮನೆಗೆ ತೆರಳಿದ ರಾಜಶೇಖರ್ ರಾಮಸ್ವಾಮಿ ಅವರು ಕ್ಷೇತ್ರದ ಸಮಗ್ರ ಅಭಿವೃದ್ದಿಗಾಗಿ ➘2

# ಶ್ರೀ ರೇವಣ ಸಿದ್ದೇಶ್ವರ ದೇವಸ್ಥಾದ ಮಹಾದ್ವಾರ ನಿರ್ಮಾಣಕ್ಕೆ ಅನುದಾನ ನೀಡಲು ಮನವಿ




■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.4**-ಶ್ರೀ ರೇವಣ ಸಿದ್ದೇಶ್ವರ ದೇವಸ್ಥಾನದ ಸಂಪೂರ್ಣ ಜೀರ್ಣೋದ್ಧಾರ ಹಾಗೂ ಮುಂಭಾಗದಲ್ಲಿ ಮಹಾದ್ವಾರ ನಿರ್ಮಾಣ ಕಾಮಗಾರಿಗಾಗಿ ಹೆಚ್ಚುವರಿ ಅನುದಾನ ಮಂಜೂರು ಮಾಡುವಂತೆ ಒತ್ತಾಯಿಸಿ

ಶ್ರೀ ರೇವಣ ಸಿದ್ದೇಶ್ವರ ದೇವಸ್ಥಾನ ಆಡಳಿತ ಮಂ ಡಳಿ, ಗಜಾನನ ನವ ಯುವಕ ಸಂಘದ ವತಿಯಿಂದ ಸಚಿವ ಎನ್ ಎಸ್ ಬೋಸರಾಜರಿಗೆ ಮನವಿ ಸಲ್ಲಿಸಲಾಯಿತು. ➘2

# ಕ್ರೈಸ್ತ ಬಾಂಧವರಿಂದ ರನ್ ಫಾರ್ ಜೀಸಸ್ ರ್‍ಯಾಲಿ-ಮೆರವಣಿಗೆ




■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.4**-ಕ್ರೈಸ್ತ ಧರ್ಮ ಬಾಂಧವರಿಂದ ಶನಿವಾರ ಬೆಳಿಗಿನ ಜಾವದಲ್ಲಿ ರನ್ ಫಾರ್ ಜೀಸಸ್ ರ್‍ಯಾಲಿಯನ್ನು ನಡೆಸಲಾಯಿತು. ವಿವಿಧ ಚರ್ಚಗಳಿಂದ ಸಮಾವೇಶಗೊಂಡ ಕ್ರೈಸ್ತ ಬಾಂಧವರು ವಿಶ್ವಶಾಂತಿಗಾಗಿ ರ್‍ಯಾಲಿ ನಡೆಸಿದರು.

ಕ್ರಿಸ್ತನ ಸಂದೇಶಗಳನ್ನು ಸಾರುವ ಮೂಲಕ ಡಾ.ಬಾಬು ಜಗಜೀವನರಾಂ ವೃತ್ತದಿಂದ ಬಸವೇಶ್ವರ ವೃತ್ತದವರೆಗೆ ರ್‍ಯಾಲಿ ನಡೆಸಲಾಯಿತು. ಸಮೂದಾಯ ಪ್ರಮುಖರಾದ ರೆವೆಡೆಂಡ್ ಫಾದರ್ ಆರ್.ಸಾಮ್ಯುವೆಲ್, ಫಾದರ ಜಾನ್ ವೆಸ್ಲಿ ಡೇವಿಡ್, ಫಾದರ್ ಲುಕ್ ಫಾಸ್ಟರ್, ಫಾದರ್ ವಿಲಬ್ರಟ್ ಫಾಸ್ಟರ್, ಫಾದರ್ ವಿ.ವರಪ್ರಸಾದ ಫಾಸ್ಟರ್, ಫಾದರ್ ಜರ್ನ ಜೇಮ್ಸ್ ಫಾಸ್ಟರ್, ಫಾದರ್ ಸಂಪತ್ ಪಾಸ್ಟರ್, ಎಂ.ಆರ್. ಶಂಕರ ಹುನಗುಂದ ಸೇರಿದಂತೆ ಕ್ರೈಸ್ತ ಬಾಂಧವರು, ಮಹಿಳೆಯರು ಭಾಗಿಯಾದರು.

# ಓಪೆಕ್ ಆಸ್ಪತ್ರೆ ಎದುರುಗಡೆ ಟೀನ್ ಶೆಡ್‌ಗಳ ತೆರವು

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.4**-ರಾಜಕೀಯ ಮೇಲಾಟಗಳ ಮಧ್ಯ ಸ್ಥಗಿತಗೊಂಡಿದ್ದ ನಗರ ಓಪೆಕ್ ಎದುರಿನ ಟೀನ್ ಶೆಡ್‌ಗಳ ತೆರವು ಪುನಃ ಪ್ರಾರಂಭಗೊಂಡಿದೆ. 11 ಕೆವಿ ವಿದ್ಯುತ್ ತಂತಿ ಕಳೆಗಡೆ ಇರುವ ಅಂಗಡಿಗಳಿಂದ ಅಪಾಯ ಎದುರಾಗಿರುವ ಕುರಿತು ಜೆಸ್ಕಾಂ ಅಧಿಕಾರಿಗಳು ತೆರವುಗೊಳಿಸುವಂತೆ ಮಹಾನಗರ ಪಾಲಿಕೆ ಆಯುಕ್ತರಿಗೆ ಬರೆದ ಪತ್ರದ ಹಿನ್ನಲೆಯಲ್ಲಿ ತೆರವಿಗೆ ಮುಂದಾಗಿದ್ದಾಗ ರಾಜಕೀಯ ಮಧ್ಯಪ್ರವೇಶಿಸಿ ತೆರವು ಕಾರ್ಯಾಚರಣೆ ಸ್ಥಗಿತಗೊಂಡಿತ್ತು.

ಕೊನೆಗೂ ಅಪಾಯ ಹಿನ್ನಲೆಯಲ್ಲಿ ತೆರವು ಕಾರ್ಯಚರಣೆ ಪೂರ್ಣಗೊಳಿಸುವ ಕಾರ್ಯದಲ್ಲಿ ಪಾಲಿಕೆ ಸಿಬ್ಬಂದಿಗಳುಕಾರ್ಯ ಪ್ರವೃತ್ತರಾಗಿದ್ದಾರೆ. ಟೀನ್ ಶೆಟ್‌ಗಳಲ್ಲಿ ವ್ಯಾಪಾರವಹಿವಾಟು ನಡೆಸುವರ ಪರ ಧ್ವನಿಯೆತ್ತಿ ರಕ್ಷಣೆಗೆ ಕೆಲವರು ತೆರವಿಗೆ ವಿರೋಧಿಸಿದ್ದರು. ➘2



# ಗ್ಯಾಸ್ ಕೊರತೆ ಹಿನ್ನಲೆ:ರಾತ್ರಿಯಡಿ ಸಾಲುಗಟ್ಟಿ ನಿಂತ ಅಟೋಗಳು ಡಿಸಿ ಮಧ್ಯಸ್ಥಿಕೆವಹಿಸಲು ಅಟೋ ಚಾಲಕರ ಆಗ್ರಹ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.4**-ಎಲ್‌ಪಿಜಿ ಗ್ಯಾಸ್ ನಂಬಿಕೊಂಡಿರುವ ಅಟೋ ಚಾಲಕರು ರಾತ್ರಿಯಡಿ ಜಾಗರಣೆ ಮಾಡಿ ಸರತಿಯ ಸಾಲಿನಲ್ಲಿ ನಿಂತರು ಬೇಡಿಕೆಗೆ ಎಲ್‌ಪಿಜಿ ಗ್ಯಾಸ್‌ದೊರೆಯದ ಪರಸ್ಥಿತಿ ನಿರ್ಮಾಣವಾಗಿದೆ.ಗ್ಯಾಸ್ ಬಂಕ್ ಮುಂದೆ ನೂರಾರು ಅಟೋಗಳು ಕಾದುಕುಳಿತುಕೊಳ್ಳುವಂತಾಗಿದ್ದು ಅಟೋ ಚಾಲಕರ ದುಡಿಮೆಗೆ ಸಮಸ್ಯೆ ಎದುರಾಗುವಂತಾಗಿದೆ.

ಕಳೆದ ಹದಿನೈದು ದಿನಗಳಿಂದ ಗ್ಯಾಸ್ ಕೊರತೆಯಾಗಿದ್ದು ಅಟೋಗಳು ಸಂಚರಿಸಿದಂತಾಗಿದೆ. ನಿಗಧಿಗಿಂತ ಹೆಚ್ಚಿನ ಬೆಲೆ ವಸೂಲಿ ಮಾಡಲಾಗುತ್ತಿದೆ.

ಕೂಡಲೇ ಜಿಲ್ಲಾಧಿಕಾರಿಗಳು ಮಧ್ಯಪ್ರವೇಶಿಸಿ ಸಮಸ್ಯೆಯನ್ನು ಪರಿಹರಿಸುವಂತೆ ಅಜಾದ್ ಅಟಫ ಚಾಲಕರ ಸಂಘದ ಸೈಯದ್ ಭಾಷಾ ಖಾದ್ರಿ ಹೇಳಿದರು. 10 ದಿನಗಳಿಂದ ಅಟೋ ಸಂಚರಿಸಿದೇ ಇರುವದರಿಂದ ➘2

# ತೃತೀಯ ಭಾಷೆ ಮೇಲಿನ ಪ್ರೇಮ ಉತ್ತರ ಭಾರತದ ರಾಜ್ಯಗಳಲ್ಲಿ ಉಕ್ಕಿ ಹರಿಸಿ, ನಿಮ್ಮ ಅಧಿಕಪ್ರಸಂಗವನ್ನ ಕರ್ನಾಟಕ ಒಪ್ಪಲ್ಲ: ರಾಜ್ಯಪಾಲರ ವಿರುದ್ಧ ಕರವೇ ಆಕ್ರೋಶ

**ಬೆಂಗಳೂರು,ಏ.4-**ನಮ್ಮ ನೆಲದಲ್ಲಿ ನಿಮಗೆ ಐಶಾರಾಮಿ ವ್ಯವಸ್ಥೆ ಕಲ್ಪಿಸಿಕೊಟ್ಟಿದ್ದೇವೆ. ಕನ್ನಡಿಗರ ತೆರಿಗೆ ದುಡ್ಡಿನಲ್ಲಿ ರಾಜಭವನ ನಡೆಯುತ್ತಿದೆ. ತಿಂದ ಮನೆಗೆ ಕನ್ನ ಹಾಕುವುದು ತರವಲ್ಲ. ಇದೇ ಅಧಿಕಪ್ರಸಂಗವನ್ನು ಮುಂದುವರೆಸಿದರೆ ಗಂಟುಮೂಟೆ ಕಟ್ಟಿಕೊಂಡು ನಿಮ್ಮ ರಾಜ್ಯಕ್ಕೆ ತೊಲಗಿ ಎಂದು ರಾಜ್ಯಪಾಲರ ವಿರುದ್ಧ ಕರ್ನಾಟಕ ರಕ್ಷಣಾ ವೇದಿಕೆ ಆಕ್ರೋಶ ವ್ಯಕ್ತಪಡಿಸಿದೆ.

ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಲ್ಲಿ ತೃತೀಯ ಭಾಷೆಗೆ ಗ್ರೇಡಿಂಗ್ ನೀಡುವ ಸರ್ಕಾರದ ನಿರ್ಧಾರವನ್ನು ಮರುಪರಿಶೀಲಿಸುವಂತೆ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿರುವ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ವಿರುದ್ಧ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ ಅವರು ತೀವ್ರವಾಗಿ ಕಿಡಿಕಾರಿದ್ದಾರೆ.

ಕರ್ನಾಟಕ ಸರ್ಕಾರಕ್ಕೆ ನೀವು ಬರೆದ ಪತ್ರದ ಕುರಿತ ಮಾಧ್ಯಮ ವರದಿಗಳನ್ನು ಗಮನಿಸಿದೆ. ರಾಜ್ಯದಲ್ಲಿ ಎಸ್ ಎಸ್ ಎಲ್ ಸಿ ಪರೀಕ್ಷೆಗಳಲ್ಲಿ ತೃತೀಯ ಭಾಷೆಗೆ ಗ್ರೇಡಿಂಗ್ ನೀಡುವ ಸರ್ಕಾರದ ನಿರ್ಧಾರವನ್ನು ಮರು ಪರಿಶೀಲಿಸುವಂತೆ ನೀವು ಹೇಳಿದ್ದೀರಿ. ನಿಮ್ಮ ಈ ಪತ್ರ, ಈ ಹಸ್ತಕ್ಷೇಪ ಒಕ್ಕೂಟ ವ್ಯವಸ್ಥೆಯನ್ನು ಅಣಕಿಸುವಂತೆ ಇದೆ. ನಿಮ್ಮ ಅಧಿಕಪ್ರಸಂಗವನ್ನು ಕರ್ನಾಟಕದ ಜನತೆ ಒಪ್ಪಿಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ.

ರಾಜ್ಯಪಾಲರು ಸರ್ಕಾರದ ಪದನಿಮಿತ್ತ ಮುಖ್ಯಸ್ಥರು ಎಂಬುದನ್ನು ನೀವು ಮರೆತಿದ್ದೀರಿ. ನೀವು ನಮ್ಮಿಂದ ನೇರವಾಗಿ ಆಯ್ಕೆಯಾದ ಜನಪ್ರತಿನಿಧಿಯಲ್ಲ. ಒಂದು ಸರ್ಕಾರ ಬಹುಮತದೊಂದಿಗೆ ಸದೃಢವಾಗಿ ಕಾರ್ಯ ನಿರ್ವಹಿಸುತ್ತಿರುವಾಗ ದೈನಂದಿನ ಆಡಳಿತದಲ್ಲಿ ಮೂಗು ತೂರಿಸಲು ನಿಮಗೆ ಯಾವುದೇ ನೈತಿಕ ಅಧಿಕಾರವಿಲ್ಲ, ಸಾಂವಿಧಾನಿಕ ಹೊಣೆಗಾರಿಕೆಯಿಲ್ಲ. ಅದು ನಿಮ್ಮ ವ್ಯಾಪ್ತಿಯ ಕೆಲಸವೂ ಅಲ್ಲ.

ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಕಾಲಕಾಲಕ್ಕೆ ಬದಲಾವಣೆ ಮಾಡುವ ಸಂವಿಧಾನಬದ್ಧ ಹಕ್ಕು ರಾಜ್ಯ ಸರ್ಕಾರಕ್ಕಿದೆ. ಸರ್ಕಾರ ಈಗ ಗ್ರೇಡಿಂಗ್ ವ್ಯವಸ್ಥೆ ಜಾರಿಗೆ ತರುತ್ತಿರುವುದಕ್ಕೆ ಸಾಕಷ್ಟು ಕಾರಣಗಳಿವೆ. ಇದರ ಸಾಧಕ ಬಾಧಕಗಳನ್ನು ನಮ್ಮ ಜನಪ್ರತಿನಿಧಿಗಳು ನೋಡಿಕೊಳ್ಳುತ್ತಾರೆ. ಭಬೆಂಗಳೂರು ಸ್ಥಳೀಯ ಭಾಷೆಗಳ ಸಂರಕ್ಷಣಾ ಸಂಘಭದವರು ನಿಮಗೆ ಕೊಟ್ಟಿದ್ದಾರೆ ಎನ್ನಲಾದ ಮನವಿಗೆ ತುರ್ತಾಗಿ ಪ್ರತಿಕ್ರಿಯಿಸಿರುವುದನ್ನು ಕೇಳಿ ಆಶ್ಚರ್ಯವಾಯಿತು. ಬೆಂಗಳೂರಿನಲ್ಲಿ ಇಂಥದ್ದೊಂದು ಸಂಘ ಇದೆ ಎಂಬುದೇ ನಮಗೆ ತಿಳಿದಿರಲಿಲ್ಲ. ಈ ರೀತಿಯ ನಾಟಕಗಳನ್ನು ನಾವು ಎಷ್ಟೋ ನೋಡಿದ್ದೇವೆ. ಇಂಥ ಕುತಂತ್ರಗಳು ಕರ್ನಾಟಕಕ್ಕೆ ಹೊಸದೇನೂ ಅಲ್ಲ. ಮರೆಯಲ್ಲಿ ನಿಂತು ಬಾಣ ಬಿಡುವ ಈ ಹೇಡಿಗಳು ಬೀದಿಗೆ ಬರಲಿ ಎಂದು ನಾವೂ ಕಾಯುತ್ತಿದ್ದೇವೆ.

ರಾಜ್ಯಪಾಲರ ಹುದ್ದೆ ಎಂಬುದೇ ಪ್ರಜಾಪ್ರಭುತ್ವ ವ್ಯವಸ್ಥೆ ಒಳಗೆ ನುಸುಳಿಕೊಂಡಿರುವ ರಾಜಶಾಹಿ ವ್ಯವಸ್ಥೆಯ ಒಂದು ಪಳೆಯುಳಿಕೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರೇ ಪ್ರಭುಗಳು. ಇನ್ಯಾರೋ ಇಲ್ಲಿ ರಾಜರಂತೆ ಮೆರೆಯುವುದು ಸಾಧ್ಯವಿಲ್ಲ. ನಿಮ್ಮ ಈ ಅಧಿಕಪ್ರಸಂಗದ ಪತ್ರ ರಾಜ್ಯಪಾಲರ ವ್ಯವಸ್ಥೆ ನಮ್ಮ ದೇಶಕ್ಕೆ ಬೇಕೇ ಎಂಬ ಪ್ರಶ್ನೆಯನ್ನು ಮತ್ತೆ ಮುನ್ನೆಲೆಗೆ ತಂದಂತಾಗಿದೆ.

ಜನರಿಂದ ಆಯ್ಕೆಯಾದ ಸರ್ಕಾರದ ದೈನಂದಿನ ಆಡಳಿತದ ತೀರ್ಮಾನದ ಕುರಿತು ಪತ್ರ ಬರೆಯಲು ನಿಮಗೆ ಯಾವುದೇ ಹಕ್ಕಿಲ್ಲ. ಒಂದು ವೇಳೆ ನೀವು ಸಾಮಾನ್ಯ ನಾಗರಿಕರಾಗಿ ಈ ಪತ್ರವನ್ನು ಬರೆದಿದ್ದರೆ, ಮೊದಲು ಉತ್ತರದ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ತ್ರಿಭಾಷಾ ನೀತಿ ಅನ್ವಯ ಕನ್ನಡವನ್ನು ಮೂರನೇ ಭಾಷೆಯನ್ನಾಗಿ ಅಲ್ಲಿನ ಮಕ್ಕಳಿಗೆ ಕಲಿಸಲು ಹೇಳಿ. ನಿಮಗೆ ಆ ಧೈರ್ಯವಿಲ್ಲದಿದ್ದರೆ ಕನ್ನಡಿಗರ ಹಿತಾಸಕ್ತಿಗೆ ವಿರುದ್ಧವಾಗಿ ಕರ್ನಾಟಕದ ನೆಲದಲ್ಲಿ ನಿಂತು ಮಾತನಾಡಬೇಡಿ. ತೃತೀಯ ಭಾಷೆಯ ಮೇಲಿನ ಪ್ರೇಮವನ್ನು ಉತ್ತರ ಭಾರತದ ರಾಜ್ಯಗಳಲ್ಲಿ ಉಕ್ಕಿ ಹರಿಸಿ. ಪಾಪ, ಅಲ್ಲಿನ ಮಕ್ಕಳು ಇದುವರೆಗೆ ಎರಡೇ ಭಾಷೆಗಳನ್ನು ಓದಿಕೊಂಡು ಬಂದಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನೀವು ಹಿಂದಿ ಸಾಮ್ರಾಜ್ಯಶಾಹಿಯ ಲಾಬಿಯ ಪರವಾಗಿ ಮಾತನಾಡುತ್ತಿದ್ದೀರಿ ಎಂಬುದು ನಮಗೆ ಚೆನ್ನಾಗಿ ಗೊತ್ತಿದೆ. ಕನ್ನಡಿಗರು ಔದಾರ್ಯವಂತರು. ನಮ್ಮ ನೆಲದಲ್ಲಿ ನಿಮಗೆ ಐಶಾರಾಮಿ ವ್ಯವಸ್ಥೆ ಕಲ್ಪಿಸಿಕೊಟ್ಟಿದ್ದೇವೆ. ಕನ್ನಡಿಗರ ತೆರಿಗೆ ದುಡ್ಡಿನಲ್ಲಿ ರಾಜಭವನ ನಡೆಯುತ್ತಿದೆ. ತಿಂದ ಮನೆಗೆ ಕನ್ನ ಹಾಕುವುದು ತರವಲ್ಲ. ಇದೇ ಅಧಿಕಪ್ರಸಂಗವನ್ನು ಮುಂದುವರೆಸಿದರೆ ರಾಜ್ಯಪಾಲರೇ, ಗಂಟುಮೂಟೆ ಕಟ್ಟಿಕೊಂಡು ನಿಮ್ಮ ರಾಜ್ಯಕ್ಕೆ ತೊಲಗಿ ಎಂದು ನಾವು ಹೇಳಬೇಕಾಗುತ್ತದೆ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ನೀವು ಬರೆದಿರುವ ಪತ್ರವನ್ನು ಕೂಡಲೇ ಹಿಂದಕ್ಕೆ ಪಡೆಯಿರಿ. ಸರ್ಕಾರ ಶಿಕ್ಷಣ ತಜ್ಞರ ಅಭಿಪ್ರಾಯ ಪಡೆದು ಗ್ರೇಡಿಂಗ್ ವ್ಯವಸ್ಥೆ ಜಾರಿಗೆ ತಂದಿದೆ. ದಶಕಗಳಿಂದ ಕನ್ನಡದ ಜನತೆಯನ್ನುಕಾಡುತ್ತಿದ್ದ ಶಾಪ ವಿಮೋಚನೆಯಾಗಿದೆ. ಒಂದು ವೇಳೆ ಇದನ್ನು ಜಾರಿಗೆ ತರುವುದನ್ನು ತಡೆಯಲು ಯಾರೇ ಯತ್ನಿಸಿದರೂ ಕರ್ನಾಟಕದಲ್ಲಿ ಧಗಧಗಿಸುವ ಕ್ರಾಂತಿಯ ಜ್ವಾಲೆ ಹೊತ್ತಿಕೊಳ್ಳಲಿದೆ. ನಿಮ್ಮ ಕೆಲಸ ನೀವು ನೋಡಿಕೊಳ್ಳಿ. ಹಿಂಬಾಗಿಲಿನಲ್ಲಿ ಬಂದು ಆಡಳಿತ ಮಾಡುವ ಯತ್ನ ಮಾಡಬೇಡಿ, ನಿಮಗೆ ಆ ಅಧಿಕಾರವನ್ನು ಕರ್ನಾಟಕದ ಜನತೆ ಕೊಟ್ಟಿಲ್ಲ. ರಾಜಭವನದಲ್ಲಿ ನಿಮ್ಮ ಉಪಚಾರಕ್ಕೆ ಏನಾದರೂ ಕೊರತೆಯಾಗಿದ್ದರೆ ಕೇಳಿ, ವ್ಯವಸ್ಥೆ ಮಾಡಿಕೊಡೋಣ. ಬೇರೆ ಉಸಾಬರಿಯನ್ನು ನಮ್ಮ ಜನಪ್ರತಿನಿಧಿಗಳು ನೋಡಿಕೊಳ್ಳುತ್ತಾರೆಂದು ವ್ಯಂಗ್ಯವಾಗಿ ಹೇಳಿದ್ದಾರೆ.

# ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಕಳೆದ ಬಾರಿಗಿಂತ ದೊಡ್ಡ ಅಂತರದ ಗೆಲುವು-ಡಿಸಿಎಂ ಡಿ.ಕೆ. ಶಿವಕುಮಾರ್



**ಬೆಂಗಳೂರು,ಏ.4-**ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಲ್ಲಿ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಂದ ಮತಕ್ಕಿಂತ ಈ ಬಾರಿಯ ಉಪಚುನಾವಣೆಯಲ್ಲಿ ಹೆಚ್ಚು ಮತ ಬೀಳಲಿದ್ದು, ನಮ್ಮ ಅಭ್ಯರ್ಥಿಗಳು ಹೆಚ್ಚು ಮತಗಳ ಅಂತರದಲ್ಲಿ ಗೆಲ್ಲಲಿದ್ದಾರೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸದಾಶಿವನಗರ ನಿವಾಸದಲ್ಲಿ ಮಾತನಾಡಿದ ಅವರು, ದಾವಣಗೆರೆ ಹಾಗೂ ಬಾಗಲಕೋಟೆಯ ಉಪಚುನಾವಣೆ ಪ್ರಚಾರ ಮಾಡಿ ಬಂದಿದ್ದೇನೆ. ನಮ್ಮ ಕಾರ್ಯಕರ್ತರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಪ್ರತಿ ಮನೆ ಮನೆಗೆ ಹೋಗಿ ಗ್ಯಾರಂಟಿ ಯೋಜನೆಗಳ ಬಗ್ಗೆ ಮನವರಿಕೆ ಮಾಡುತ್ತಿದ್ದಾರೆ. ಗ್ಯಾರಂಟಿ ಫಲಾನುಭವಿಗಳಲ್ಲಿ ಕಳೆದ ಬಾರಿ ಬಿಜೆಪಿಗೆ ಮತ ಹಾಕಿರುವವರೂ ಕೂಡ ಈ ಬಾರಿ ಕಾಂಗ್ರೆಸ್‌ಗೆ ಮತ ಹಾಕುವುದಾಗಿ ತಿಳಿಸಿದ್ದಾರೆ. ಬೆಲೆ ಏರಿಕೆಯಾಗುತ್ತಿರುವ ಪರಿಸ್ಥಿತಿಯಲ್ಲಿ ಗ್ಯಾರಂಟಿ ಯೋಜನೆ ಎಷ್ಟು ನೆರವಾಗುತ್ತಿವೆ ಎಂದು ಸ್ಮರಿಸುತ್ತಿದ್ದಾರೆ. ಇವುಗಳನ್ನು ಉಳಿಸಿಕೊಳ್ಳಲು ಜನ ತೀರ್ಮಾನಿಸಿದ್ದಾರೆ ಎಂದು ತಿಳಿಸಿದರು.

ಕೇರಳ ಚುನಾವಣೆ ಪ್ರಚಾರ ಬಳಿಕ ದಾವಣಗೆರೆ ಅಥವಾ ಬಾಗಲಕೋಟೆಗೆ ತೆರಳುತ್ತೇನೆ: ಕೇರಳ ಚುನಾವಣಾ ಪ್ರಚಾರಕ್ಕೆ ತೆರಳುತ್ತಿರುವ ಬಗ್ಗೆ ಕೇಳಿದಾಗ, ಕೇರಳ ಚುನಾವಣೆ ಪ್ರಚಾರಕ್ಕೆ ಎರಡು ದಿನ ಪ್ರವಾಸ ಮಾಡಬೇಕಾಗಿದ್ದು, ಅಲ್ಲಿ ಪ್ರವಾಸ ಮಾಡಿ ಬಂದ ಬಳಿಕ, ಇಲ್ಲಿ ದಾವಣಗೆರೆ ಅಥವಾ ಬಾಗಲಕೋಟೆಗೆ ತೆರಳುತ್ತೇನೆ ಎಂದು ತಿಳಿಸಿದರು.

ಬಿಜೆಪಿಗರು ತಪ್ಪೊಪ್ಪಿಕೊಂಡು ಜನರ ಕ್ಷಮೆ ಕೇಳಲಿ: ರಾಜ್ಯದಲ್ಲಿ ಗ್ಯಾಸ್ ಅಭಾವದ ಸಮಸ್ಯೆ ಹೆಚ್ಚಾಗುತ್ತಿದೆ ಎಂದು ಕೇಳಿದಾಗ, ಆಟೋ ಚಾಲಕರಿಗೆ ಎಲ್‌ಪಿಜಿ ಅಭಾವದಿಂದ ಬಹಳ ತೊಂದರೆಯಾಗುತ್ತಿದೆ. ಇದರಿಂದ ಸಂಚಾರ ವ್ಯವಸ್ಥೆಗೆ ಪರಿಣಾಮ ಬೀರುತ್ತಿದೆ. ಜತೆಗೆ ಹೋಟೆಲ್ ಕ್ಷೇತ್ರವು ಸಮಸ್ಯೆ ಎದುರಿಸುತ್ತಿದೆ. ಕೇಂದ್ರ ಸರ್ಕಾರ ಈ ಬಗ್ಗೆ ಗಮನಹರಿಸಬೇಕು ಎಂದು ಆಗ್ರಹಿಸಿದರು. ಆಟೋ ಚಾಲಕರು ರಾಜ್ಯ ಸರ್ಕಾರಕ್ಕೆ ಮನವಿ ಮಾಡಿರುವ ಬಗ್ಗೆ ಕೇಳಿದಾಗ, ಅನಿಲ ಪೂರೈಕೆ ಅಧಿಕಾರ ರಾಜ್ಯ ಸರ್ಕಾರದ ಕೈಯಲ್ಲಿಲ್ಲ. ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಕೇಂದ್ರ ಸರ್ಕಾರ ಸರಿಯಾಗಿ ಮುಂಜಾಗ್ರತೆ, ನೀತಿ ರೂಪಿಸಬೇಕಿತ್ತು. ಈ ವಿಚಾರದಲ್ಲಿ ವಿಫಲವಾಗಿದೆ. ಈ ವಿಚಾರವಾಗಿ ಬಿಜೆಪಿಯವರು ಈವರೆಗೂ ಯಾಕೆ ಮಾತನಾಡುತ್ತಿಲ್ಲ. ನಮ್ಮಿಂದ ತೊಂದರೆಯಾಗಿದೆ ಎಂದು ಒಪ್ಪಿಕೊಂಡು ಜನರ ಬಳಿ ಕ್ಷಮೆ ಕೋರಬೇಕು ಎಂದು ಒತ್ತಾಯಿಸಿದರು.

# ಚಿಕ್ಕಮಗಳೂರು: ಪಕ್ಕದ ಫರ್ನಿಚರ್ ಅಂಗಡಿಗೆ ಬೆಂಕಿ ಇಟ್ಟ ವ್ಯಾಪಾರಿ ಸೇರಿ ಮೂವರ ಬಂಧನ





**ಚಿಕ್ಕಮಗಳೂರು,ಏ.4-**ನಗರದ ಐ.ಜಿ ರಸ್ತೆಯಲ್ಲಿರುವ ಫರ್ನಿಚರ್ ಅಂಗಡಿಯೊಂದಕ್ಕೆ ಕಿಡಿಗೇಡಿಗಳು ಬೆಂಕಿ ಹಚ್ಚಿದ ಪ್ರಕರಣಕ್ಕೆ ವ್ಯಾಪಾರ ದ್ವೇಷವೇ ಕೃತ್ಯಕ್ಕೆ ಕಾರಣ ಎಂಬುದು ಪೊಲೀಸ್ ತನಿಖೆಯಿಂದ ಬಯಲಾಗಿದೆ.

ಕಳೆದ ಭಾನುವಾರ ಎ.ಆರ್. ಫರ್ನಿಚರ್ ಅಂಗಡಿಯಲ್ಲಿ ಅನಿರೀಕ್ಷಿತವಾಗಿ ಬೆಂಕಿ ಕಾಣಿಸಿಕೊಂಡಿತ್ತು. ಈ ದುರ್ಘಟನೆಯಲ್ಲಿ ಅಂಗಡಿಯಲ್ಲಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಫರ್ನಿಚರ್ ಸಾಮಗ್ರಿಗಳು ಸಂಪೂರ್ಣವಾಗಿ ಭಸ್ಮವಾಗಿದ್ದವು. ಪೊಲೀಸ್ ತನಿಖೆಯಲ್ಲಿ ಎ.ಆರ್ ಫರ್ನಿಚರ್ ಅಂಗಡಿಯ ಪಕ್ಕದಲ್ಲೇ ಮಹಾರಾಜ ಫರ್ನಿಚರ್ ಎಂಬ ಅಂಗಡಿ ಇದೆ. ತನ್ನ ಅಂಗಡಿಯಲ್ಲಿ ವ್ಯಾಪಾರವಿಲ್ಲ, ಆದರೆ, ಪಕ್ಕದ ಎ.ಆರ್ ಫರ್ನಿಚರ್ ಅಂಗಡಿಯಲ್ಲಿ ಉತ್ತಮ ವ್ಯಾಪಾರ ನಡೆಯುತ್ತಿದೆ ಎಂಬ ಅಸೂಯೆ ಮತ್ತು ದ್ವೇಷವೇ ಈ ಕೃತ್ಯಕ್ಕೆ ಪ್ರೇರಣೆಯಾಗಿದೆ ಎಂದು ತಿಳಿಸಿದ್ದಾರೆ.

ಮಹಾರಾಜ ಫರ್ನಿಚರ್ ಮಾಲೀಕ ಹ್ಯಾರಿಸ್, ಎ.ಆರ್. ಫರ್ನಿಚರ್ ಅಂಗಡಿಯನ್ನು ನಾಶಪಡಿಸಲು ಸಂಚು ರೂಪಿಸಿದ್ದ. ಇದಕ್ಕಾಗಿ ಸಾದ್ ಮತ್ತು ಯಾಕೂಬ್ ಎಂಬುವವರಿಗೆ 20 ಸಾವಿರ ರೂಪಾಯಿ ಹಣ ನೀಡಿ, ಅವರಿಂದಲೇ ಬೆಂಕಿ ಹಚ್ಚಿಸಿದ್ದಾರೆ ಎಂಬುದು ವಿಚಾರಣೆಯಲ್ಲಿ ದೃಢಪಟ್ಟಿದೆ.ಪ್ರಕರಣ ಕೈಗೆತ್ತಿಕೊಂಡ ಚಿಕ್ಕಮಗಳೂರು ನಗರ ಠಾಣೆಯ ಪೊಲೀಸರು ಸ್ಥಳದಲ್ಲಿದ್ದ ಸಿಸಿಟಿವಿ ದೃಶ್ಯಾವಳಿಗಳನ್ನು ಕೂಲಂಕಷವಾಗಿ ಪರಿಶೀಲನೆ ನಡೆಸಿದರು. ಈ ವೇಳೆ, ಕೃತ್ಯದ ಸತ್ಯಾಂಶ ಹೊರ ಬಂದಿದ್ದು, ತಕ್ಷಣವೇ ಕಾರ್ಯಾಚರಣೆ ನಡೆಸಿ ಮಹಾರಾಜ ಫರ್ನಿಚರ್ ಮಾಲೀಕ ಹಾಗೂ ಬೆಂಕಿ ಹಚ್ಚಿದ ಆರೋಪಿಗಳನ್ನು ಬಂಧಿಸಿದ್ದಾರೆ. ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಹೆಚ್ಚಿನ ತನಿಖೆ ಮುಂದುವರಿದಿದೆ. ಈ ಬಗ್ಗೆ ನಗರ ಪೊಲೀಸ್ ಠಾಣೆಯ ಠಾಣಾಧಿಕಾರಿ ಪ್ರತಿಕ್ರಿಯೆ ನೀಡಿದ್ದು, ಬೆಂಕಿ ಬಿದ್ದ ದಿನ ಮೊದಲ ದಿನ ಜಾಗದಲ್ಲಿ ಯಾವುದೇ ವಿದ್ಯುತ್ ವೈರುಗಳು ಇರಲಿಲ್ಲ. ಆಕಸ್ಮಿಕವಾಗಿ ಅಥವಾ ಶಾರ್ಟ್ ಸರ್ಕ್ಯೂಟ್‌ನಿಂದ ವಿದ್ಯುತ್ ಬೀಳಲು ಸಾಧ್ಯವಿಲ್ಲ ಎಂಬುದು ಆ ದಿನವೇ ಪ್ರಾಥಮಿಕ ತನಿಖೆಯಿಂದ ತಿಳಿದಿತ್ತು.

ಕೂಡಲೇ ಇದರ ನಿಖರ ಕಾರಣ ತಿಳಿಯಲು ಪ್ರಕರಣದ ಬೆನ್ನಟ್ಟಿದಾಗ ಪಕ್ಕದ ಅಂಗಡಿಯ ಮಾಲೀಕ ಹ್ಯಾರಿಸ್ ತನಗೆ ಸರಿಯಾಗಿ ವ್ಯಾಪಾರವಾಗುತ್ತಿಲ್ಲ. ಪಕ್ಕದ ಅಂಗಡಿಗೆ ತುಂಬಾ ಚೆನ್ನಾಗಿ ವ್ಯಾಪಾರ ಆಗುತ್ತಿದೆ ಎಂದು ಇಬ್ಬರನ್ನು ಕರೆ ತಂದು ಅವರಿಗೆ 20 ಸಾವಿರ ಹಣ ನೀಡಿ, ಆ ಅಂಗಡಿಗೆ ಬೆಂಕಿ ಹಾಕಿಸಿದ್ದಾನೆ ಎಂಬ ವಿಚಾರ ತನಿಖೆಯಿಂದ ಸತ್ಯ ಹೊರ ಬಿದ್ದಿದೆ. ಹ್ಯಾರಿಸ್, ಯಾಕೂಬ್, ಸಾದ್ ಎಂಬ ಮೂರು ವ್ಯಕ್ತಿಗಳನ್ನು ಬಂಧಿಸಿದ್ದೇವೆ. ಈ ಘಟನೆಯಿಂದ ಬೆಂಕಿಯಿಂದ ಸುಟ್ಟು ಹೋದ ಫರ್ನಿಚರ್ ಅಂಗಡಿ ಮಾಲೀಕನಿಗೆ ಆರರಿಂದ - ಏಳು ಲಕ್ಷ ರೂ ನಷ್ಟವಾಗಿರಬಹುದು ಎಂದು ತಿಳಿಸಿದ್ದಾರೆ.

# ಇಂದು ಪಂದ್ಯಕ್ಕೆ ಅಗತ್ಯ ಭದ್ರತೆ ವಹಿಸಲಾಗುವುದು: ಸೀಮಂತ್ ಕುಮಾರ್ ಸಿಂಗ್

**ಬೆಂಗಳೂರು,ಏ.4-**ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಹಾಗೂ ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ನಡುವೆ ಭಾನುವಾರ ಎಂ.ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿರುವ ಹೈ-ವೋಲ್ಟೇಜ್ ಐಪಿಎಲ್ ಪಂದ್ಯಕ್ಕೆ ಭದ್ರತೆ ವಹಿಸುವ ಕುರಿತು ಅಧಿಕಾರಿಗಳ ಸಭೆ ನಡೆಸಿ, ಅಗತ್ಯವಿರುವ ಕಡೆಗಳಲ್ಲಿ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

ನಗರದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೊದಲ ಪಂದ್ಯದಲ್ಲಿ ಪೊಲೀಸ್ ಇಲಾಖೆ ಮತ್ತು ಇತರ ಸಮಿತಿಗಳು ಸಮನ್ವಯದಿಂದ ಕೆಲಸ ಮಾಡಿದ್ದು, ಜನಸಂದಣಿ ನಿಯಂತ್ರಣ ಯಶಸ್ವಿಯಾಗಿ ನಡೆದಿದೆ ಎಂದು ಶ್ಲಾಘಿಸಿದರು.

ನಮ ಮೆಟ್ರೋ ಸೇವೆಯಿಂದ ಸಹಕಾರಿಯಾಗಿದ್ದು, ಕಬ್ಬನ್ ಪಾರ್ಕ್ ಮತ್ತು ಎಂ.ಜಿ. ರೋಡ್ ನಿಲ್ದಾಣಗಳಲ್ಲಿ ಜನಸಂದಣಿ ನಿರ್ವಹಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಬಿಎಂಟಿಸಿ ವತಿಯಿಂದ ಶಟಲ್ ಬಸ್ ಮತ್ತು ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಮಾಡುವಂತೆ ವಿನಂತಿಸಲಾಗಿದೆ. ಕ್ವೀನ್ಸ್ ರೋಡ್, ಕಬ್ಬನ್ ರೋಡ್, ಲಿಂಕ್ ರೋಡ್ ಮತ್ತು ಎಂ.ಜಿ. ರೋಡ್‌ಗಳಲ್ಲಿ ಸಂಚಾರ ದಟ್ಟಣೆ ತಪ್ಪಿಸಲು ಸಾರ್ವಜನಿಕರು ಸಹಕರಿಸಬೇಕು.

ಟಿಕೆಟ್ ಇದ್ದವರು ಮಾತ್ರ ಕ್ರೀಡಾಂಗಣದತ್ತ ಬರಬೇಕು ಮತ್ತು ನಿಗದಿತ ಸಮಯಕ್ಕೆ ಮುಂಚಿತವಾಗಿ ಬಂದು ಟಿಹೋಲ್ಡಿಂಗ್ ಏರಿಯಾಟಿ ಬಳಸಿಕೊಳ್ಳಬೇಕು. ಟಿಕೆಟ್ ಇಲ್ಲದವರು ರಸ್ತೆಯಲ್ಲಿ ನಿಂತು ಸಂಚಾರಕ್ಕೆ ಅಡ್ಡಿಪಡಿಸಬಾರದು. ಅಂತಹವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಆಯುಕ್ತರು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಿದ್ದಾರೆ.ಕಳೆದ ಪಂದ್ಯದಲ್ಲಿ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಮುನ್ನೆಚ್ಚರಿಕಾ ಕ್ರಮವಾಗಿ ಕ್ರೀಡಾಂಗಣದ ಸುತ್ತಮುತ್ತ ಕಾನೂನು ಸುವ್ಯವಸ್ಥೆ, ಸಂಚಾರ, ಕೆಎಸ್‌ಆರ್‌ಪಿ, ಗೃಹರಕ್ಷಕ ದಳ ಸೇರಿದಂತೆ ಒಟ್ಟು ಎರಡು ಸಾವಿರ ಅಧಿಕಾರಿ ಮತ್ತು ಸಿಬ್ಬಂದಿಗಳನ್ನ ನಿಯೋಜಿಸಲಾಗಿತ್ತು. ಅಲ್ಲದೇ ಮೈದಾನದ ಬಳಿ ಉಂಟಾಗುವ ಜನಸಂದಣಿ ನಿಯಂತ್ರಿಸಲು 140 ಸಿಬ್ಬಂದಿಗಳನ್ನೊಳಗೊಂಡ 7 ವಿಶೇಷ ತಂಡಗಳನ್ನು ರಚಿಸಲಾಗಿತ್ತು. ಪಂದ್ಯ ಆರಂಭವಾಗಿವ 4 ಗಂಟೆಗೂ ಮೊದಲು ಪ್ರೇಕ್ಷಕರು ಕ್ರೀಡಾಂಗಣಕ್ಕೆ ಬರಲು ಅವಕಾಶ ನೀಡಲಾಗಿತ್ತು. ಯಾವುದೇ ಭೌತಿಕ ಟಿಕೆಟ್‌ಗಳಿಲ್ಲದೇ ಕೇವಲ ಕ್ಕಿ ಟಿಕೆಟ್‌ಗಳನ್ನ ಮಾತ್ರವೇ ನೀಡಲಾಗಿತ್ತು. ಟಿಕೆಟ್ ಯಾರ ಹೆಸರಿನಲ್ಲಿ ಬುಕ್ ಆಗಿದೆಯೋ ಅವರಿಗೆ ಮಾತ್ರವೇ ಕ್ರೀಡಾಂಗಣದ ಪ್ರವೇಶಕ್ಕೆ ಅವಕಾಶ ನೀಡಲಾಗಿತ್ತು. ಅಲ್ಲದೇ ಪಂದ್ಯದ ಟಿಕೆಟ್ ಹೊಂದಿರುವವರಿಗೆ ಮೆಟ್ರೋ ಪ್ರಯಾಣ ಉಚಿತವಾಗಿ ನೀಡಲಾಗಿತ್ತು. ಪ್ರೇಕ್ಷಕರ ಅನುಕೂಲಕ್ಕಾಗಿ ಐದು ಪ್ರಮುಖ ಸ್ಥಳಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಕೂಡ ಮಾಡಲಾಗಿತ್ತು.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸಂಭಾವ್ಯ ಆಟಗಾರರು: ರಜತ್ ಪಾಟಿದಾರ್ (ನಾಯಕ), ಟಿಮ್ ಡೇವಿಡ್, ವಿರಾಟ್ ಕೊಹ್ಲಿ, ದೇವದತ್ ಪಡಿಕ್ಕಲ್, ಫಿಲಿಪ್ ಸಾಲ್ಟ್, ಜಿತೇಶ್ ಶರ್ಮಾ, ಜಾಕೋಬ್ ಬೆಥೆಲ್, ಕೃನಾಲ್ ಪಾಂಡ್ಯ, ರೊಮಾರಿಯೋ ಶೆಫರ್ಡ್, ಅಭಿನಂದನ್ ಸಿಂಗ್, ಜೋಶ್ ಹ್ಯಾಜಲ್‌ವುಡ್, ರಾಸಿಖ್ ಸಲಾಮ್ ದರ್, ಭುವನೇಶ್ವರ್ ಕುಮಾರ್, ಸುಯಶ್ ಶರ್ಮಾ, ಸ್ವಪ್ನಿಲ್ ಸಿಂಗ್, ನುವಾನ್ ತುಷಾರ, ವೆಂಕಟೇಶ ಅಯ್ಯರ್, ಜಾಕೋಬ್ ಡಫಿ, ಜೋರ್ಡಾನ್ ಕಾಕ್ಸ್, ವಿಕ್ಕಿ ಓಸ್ಟ್ವಾಲ್, ವಿಹಾನ್ ಮಲ್ಹೋತ್ರಾ, ಕಾನಿಷ್ಕ್ ಚೌಹಾಣ್, ಮಂಗೇಶ್ ಯಾದವ್, ಸಾತ್ವಿಕ್ ದೇಸ್ವಾಲ್ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಸಂಭಾವ್ಯ ಆಟಗಾರರು: ರುತುರಾಜ್ ಗಾಯಕ್ವಾಡ್ (ನಾಯಕ), ಡೆವಾಲ್ಡ್ ಬ್ರೆವಿಸ್, ಎಂಎಸ್ ಧೋನಿ, ಉರ್ವಿಲ್ ಪಟೇಲ್, ಸಂಜು ಸ್ಯಾಮ್ಸನ್, ಶಿವಂ ದುಬೆ, ರಾಮಕೃಷ್ಣ ಘೋಷ್, ಆಯುಷ್ ಮಹಾತ್ರೆ, ಶ್ರೇಯಸ್ ಗೋಪಾಲ್, ಜೇಮೀ ಓವರ್ಟನ್, ಖಲೀಲ್ ಅಹಮದ್, ಅಂಶುಲ್ ಕಾಂಬೋಜ್, ಗುರ್ಜಪ್ನೀತ್ ಸಿಂಗ್, ಮುಖೇಶ್ ಚೌಧರಿ, ನೂರ್ ಅಹ್ಮದ್, ಅಕೇಲ್ ಹೋಸೇನ್, ಪ್ರಶಾಂತ್ ವೀರ್, ಮ್ಯಾಥ್ಯೂ ಶಾರ್ಟ್, ಸರ್ಫರಾಜ್ ಖಾನ್, ಮ್ಯಾಟ್ ಹೆನ್ರಿ, ರಾಹುಲ್ ಚಹರ್, ಜಕಾರಿ ಫೌಲ್ಕ್ಸ್, ಸ್ಪೆನ್ಸರ್ ಜಾನ್ಸನ್, ಅಮನ್ ಖಾನ್, ಕಾರ್ತಿಕ್ ಶರ್ಮಾ

# ಬೆಂಗಳೂರಿನಲ್ಲಿ ನೆಲೆಸಿದ್ದ 272 ಅಕ್ರಮ ಬಾಂಗ್ಲಾ ವಲಸಿಗರು ಗಡಿಪಾರು



**ಬೆಂಗಳೂರು,ಏ.4-**ನಗರದಲ್ಲಿ ಅಕ್ರಮವಾಗಿ ನೆಲೆಸಿದ್ದ ಬಾಂಗ್ಲಾ ವಲಸಿಗರನ್ನು ಪತ್ತೆ ಹಚ್ಚಿ ಗಡಿಪಾರು ಮಾಡುವ ಪ್ರಕ್ರಿಯೆಯನ್ನು ಪೊಲೀಸರು ಚುರುಕುಗೊಳಿಸಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಇಲ್ಲಿಯವರೆಗೂ 178 ಪುರುಷರು, 94 ಮಹಿಳೆಯರ ಸಹಿತ ಒಟ್ಟು 272 ಜನ ಅಕ್ರಮ ವಲಸಿಗರನ್ನು ಗುರುತಿಸಿ ಗಡಿಪಾರು ಮಾಡಲಾಗಿದೆ. ಪತ್ತೆಹಚ್ಚಲಾದ ಅಕ್ರಮ ವಲಸಿಗರನ್ನು ಬಿಗಿ ಭದ್ರತೆಯೊಂದಿಗೆ ತ್ರಿಪುರಾದ ಗಡಿಯವರೆಗೆ ಕರೆದೊಯ್ದು, ಭದ್ರತಾ ಪಡೆಯ ಸಹಕಾರದೊಂದಿಗೆ ಗಡಿ ದಾಟಿಸುವ ಕಾರ್ಯ ನಡೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇದಲ್ಲದೆ ಬಾಂಗ್ಲಾದೇಶದ ಪ್ರಜೆಗಳನ್ನು ಭಾರತಕ್ಕೆ ಅಕ್ರಮವಾಗಿ ಕರೆತರುತ್ತಿದ್ದ ಜಾಲದ ಇಬ್ಬರು ಏಜೆಂಟ್‌ಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಅಕ್ರಮ ವಲಸಿಗರ ಹಿಂದೆ ವ್ಯವಸ್ಥಿತವಾದ ಮೂರು ಹಂತದ ಜಾಲ ಕೆಲಸ ಮಾಡುತ್ತಿರುವುದು ಪೊಲೀಸರ ತನಿಖೆಯಿಂದ ಬಯಲಾಗಿದೆ.

ಮೊದಲು ಬಾಂಗ್ಲಾದೇಶದ ಪ್ರಜೆಗಳನ್ನು ಒಬ್ಬ ಏಜೆಂಟ್ ಭಾರತದ ಗಡಿಯವರೆಗೆ ಕರೆತಂದರೆ, ಗಡಿ ಭಾಗದಲ್ಲಿರುವ ಎರಡನೇ ಏಜೆಂಟ್ ಕಾನೂನುಬಾಹಿರವಾಗಿ ಗಡಿ ದಾಟಿಸಿ ಭಾರತದ ಒಳಕ್ಕೆ ತಂದು ಬಿಡುತ್ತಿದ್ದನು.


ಆ ನಂತರ ಅವರಿಗೆ ಇಲ್ಲಿನ ಸ್ಥಳೀಯ ಭಾಷೆಯ ಬೇಸಿಕ್ಸ್ ಕಲಿಸಿ, ನಕಲಿ ಐಡಿ ಕಾರ್ಡ್‌ಗಳನ್ನು ಸಿದ್ಧಪಡಿಸಲಾಗುತ್ತಿತ್ತು. ಬಳಿಕ ದೇಶದ ಬೇರೆ ಬೇರೆ ಭಾಗಗಳಲ್ಲಿ ಉದ್ಯೋಗ ಕೊಡಿಸಲಾಗುತ್ತಿತ್ತು. ಈ ವ್ಯವಸ್ಥಿತ ಜಾಲದ ಮೂಲಕ ವಲಸಿಗರು ನಗರದ ಹೋಟೆಲ್, ಗ್ಯಾರೇಜ್ ಹಾಗೂ ಕಟ್ಟಡ ನಿರ್ಮಾಣದಂತಹ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರು ಎಂದು ಪೊಲೀಸರ ತನಿಖೆಯಿಂದ ಬಯಲಾಗಿದೆ. ಸದ್ಯ ಬಂಧಿತ ಏಜೆಂಟ್‌ಗಳಿಂದ ಹೆಚ್ಚಿನ ಮಾಹಿತಿ ಕಲೆಹಾಕಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಜ್ಯದಲ್ಲಿ ಪತ್ತೆಯಾಗಿದ್ದ 432 ಜನ ಅಕ್ರಮ ವಲಸಿಗರು: ಕಳೆದ ಮೂರು ವರ್ಷಗಳಲ್ಲಿ ಬಾಂಗ್ಲಾದೇಶ, ಪಾಕಿಸ್ತಾನ ಸೇರಿದಂತೆ ವಿವಿಧ ದೇಶಗಳಿಂದ ಅಕ್ರಮವಾಗಿ ರಾಜ್ಯದಲ್ಲಿ ನೆಲೆಯೂರಿದ್ದ 432 ಮಂದಿ ಅಕ್ರಮ ವಲಸಿಗರನ್ನು ಪತ್ತೆ ಹಚ್ಚಲಾಗಿತ್ತು. ಈ ಪೈಕಿ 255 ಮಂದಿಯನ್ನು ಪೊಲೀಸ್ ಇಲಾಖೆ ಗಡಿಪಾರು ಮಾಡಿತ್ತು. ನಗರದ ಹೊರವಲಯದಲ್ಲಿ ಅಕ್ರಮವಾಗಿ ನೆಲೆಸಿದ್ದ 53 ಮಂದಿ ಬಾಂಗ್ಲಾದೇಶಿಯರನ್ನು ಕೆಲ ತಿಂಗಳ ಹಿಂದೆ ಪೊಲೀಸರು ಪತ್ತೆ ಹಚ್ಚಿದ್ದರು.

ಅನಧಿಕೃತವಾಗಿ ರಾಜಧಾನಿಯಲ್ಲಿ ಬಾಂಗ್ಲಾ ನುಸುಳುಕೋರರ ವಿರುದ್ಧ ವಿಳಂಬವಾಗಿ ಕ್ರಮ ಕೈಗೊಂಡಿರುವ ಬಗ್ಗೆ ಸರ್ಕಾರದ ವಿರುದ್ಧ ರಾಜ್ಯ ಬಿಜೆಪಿ ಕಿಡಿಕಾರಿತ್ತು. ಈ ಬೆನ್ನಲ್ಲೇ, ಬಾಂಗ್ಲಾದೇಶ ಸೇರಿ ವಿವಿಧ ದೇಶಗಳಿಂದ ಬಂದು ರಾಜ್ಯದಲ್ಲಿ ಬೀಡುಬಿಟ್ಟಿದ್ದ ಅಕ್ರಮ ವಲಸಿಗರ ಪತ್ತೆ, ಗಡಿಪಾರು ಹಾಗೂ ಈ ಬಗ್ಗೆ ಕೈಗೊಂಡಿರುವ ಕ್ರಮಗಳ ಕುರಿತು ಪೊಲೀಸ್ ಇಲಾಖೆ ಮಾಹಿತಿ ನೀಡಿತ್ತು.

ಲುಕ್ ಔಟ್ ನೋಟಿಸ್: ಕಳೆದ ಮೂರು ವರ್ಷಗಳಲ್ಲಿ 432 ಅಕ್ರಮ ವಲಸಿಗರನ್ನು ಪತ್ತೆ ಮಾಡಲಾಗಿದೆ. ಇದರ ಪೈಕಿ 370 ಮಂದಿ ಬಾಂಗ್ಲಾದೇಶದವರಾಗಿದ್ದಾರೆ. ಅಲ್ಲದೆ, ಪಾಕಿಸ್ತಾನದ 16 ಹಾಗೂ ಶ್ರೀಲಂಕಾದ 42 ಮಂದಿ ಇದ್ದಾರೆ. ಮೂರು ವರ್ಷಗಳಲ್ಲಿ 255 ಮಂದಿ ಅಕ್ರಮ ವಲಸಿಗರನ್ನು ಗಡಿಪಾರು ಮಾಡಲಾಗಿತ್ತು.

# ಮೈಸೂರಲ್ಲಿ ಈಜುಕೊಳಕ್ಕೆ ಹೈಟೆಕ್ ಸ್ಪರ್ಶ: ರಾಷ್ಟ್ರೀಯ ಅಂತಾರಾಷ್ಟ್ರೀಯ ಸ್ವಿಮ್ಮಿಂಗ್ ಸ್ಪರ್ಧೆ ಏರ್ಪಡಿಸಲು ಚಿಂತನೆ



**ಮೈಸೂರು,ಏ.4-**ಇಲ್ಲಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ರುವ ಒಳಾಂಗಣ ಈಜುಕೊಳಕ್ಕೆ ಅಂತಾರಾಷ್ಟ್ರೀಯ ಮಾದರಿಯಲ್ಲಿ ಟಿಹೈಟೆಕ್ ಸ್ಪರ್ಶ ನೀಡಲಾಗಿದ್ದು, ಇದೀಗ ಈಜು ಪಟು ಹಾಗೂ ಈಜುಪ್ರಿಯರನ್ನು ಆಕರ್ಷಿಸುತ್ತಿದೆ.


8 ಕೋಟಿ ರೂ. ವೆಚ್ಚದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಡಿಯಡಿ ಈಜುಕೊಳಕ್ಕೆ ಮೇಲ್ಛಾವಣಿ ಹಾಗೂ ಮೂಲ ಸೌಕರ್ಯ ಕಲ್ಪಿಸುವ ಕಾಮಗಾರಿಗೆ ದಸರಾ ವೇಳೆ ಸಿಎಂ ಚಾಲನೆ ನೀಡಿದ್ದರು. ಇದೀಗ ಕಾಮಗಾರಿ ಪೂರ್ಣಗೊಂಡಿದ್ದು, ಈಜುಕೊಳ ಎಲ್ಲರನ್ನು ಸೆಳೆಯುತ್ತಿದೆ.

3.25 ಕೋಟಿ ರೂ. ವೆಚ್ಚದ ಅಂತಾ ರಾಷ್ಟ್ರೀಯ ಮಟ್ಟದ ಈಜುಕೊಳ ನಿರ್ಮಾಣ ಕಾಮಗಾರಿಗೆ 2012ರ ಸೆಪ್ಟಂಬರ್‌ನಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗಿತ್ತು. ಆದರೆ, ಕಾಮಗಾರಿ ವಿಳಂಬದಿಂದಾಗಿ 3.25 ಕೋಟಿ ರೂ., ಇದ್ದ ಯೋಜನಾ ವೆಚ್ಚವನ್ನು 4.97 ಕೋಟಿ ರೂ.ಗಳಿಗೆ ಪರಿಷ್ಕರಣೆ ಮಾಡಲಾಗಿತ್ತು. 5 ವರ್ಷಗಳ ಬಳಿಕ ಕಾಮಗಾರಿ ಪೂರ್ಣಗೊಂಡು 2018ರಿಂದ ಸಾರ್ವಜನಿಕರಿಗೆ ಈಜುಕೊಳವನ್ನು ಮುಕ್ತಗೊಳಿಸಲಾಗಿತ್ತು. ಬಳಿಕ 2025ರಲ್ಲಿ ಜರ್ಮನಿ ಟೆಕ್ನಾಲಜಿ ಮಾದರಿಯಲ್ಲಿ ಟೆನ್ಸಿನ್ ಮೆಂಬ್ರೆನ್ (ಲೋಹದ ಕಂಬಗಳು ಅಥವಾ ಕೇಬಲ್‌ಗಳ ಸಹಾಯದಿಂದ ಬಟ್ಟೆಯನ್ನು ಎಳೆದು ಕಟ್ಟಿ ಛಾವಣಿಯಂತೆ ಬಳಸುವ ತಂತ್ರಜ್ಞಾನ) ಅಳವಡಿಸಲಾಗಿದ್ದು, ಇದರಿಂದ ಆಯಾಯ ಋತುಮಾನಕ್ಕೆ ಈಜುಕೊಳವು ಹೊಂದಿಕೊಳ್ಳಲಿದೆ. ಇದರಿಂದ ಈಜುಪಟುಗಳು ಬೇಸಿಗೆ, ಮಳೆ, ಚಳಿಗಾಲದಲ್ಲಿಯೂ ಈಜು ಕಲಿಯಲು ಹೋಗಬಹುದಾಗಿದೆ.

ಈಜುಕೊಳದ ಕುರಿತು ಮಾತನಾಡಿದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಅಂತಾರಾಷ್ಟ್ರೀಯ ಮಟ್ಟದ ಈಜುಕೊಳದಲ್ಲಿ ಕಾಂಪಿಟೇಷನ್, ವಾರ್ಮ್ ಅಪ್ ನಿರ್ಮಿಸಲಾಗಿದೆ. ಉಳಿದಂತೆ ಮಹಿಳೆಯರು ಮತ್ತು ಪುರುಷರಿಗೆ ಪ್ರತ್ಯೇಕ ಬಟ್ಟೆ ಬದಲಿಸುವ ಕೊಠಡಿ, ಸ್ನಾನಗೃಹ, ಶವರ್ ವ್ಯವಸ್ಥೆ ಹಾಗೂ ವಾಹನಗಳ ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡಲಾಗಿದೆ. ನಗರದಲ್ಲಿ ಹಲವು ಈಜುಕೊಳಗಳಿವೆ. ಆದರೆ, ಈ ಮಾದರಿಯ ಈಜುಕೊಳ ಇಲ್ಲ. ಅತಿ ಹೆಚ್ಚು ಈಜುಪಟುಗಳು ಹಾಗೂ ಈಜು ಕಲಿಯಲೆಂದು ಇಲ್ಲಿಗೆ ಬರುತ್ತಿದ್ದಾರೆ. ಅಲ್ಲದೇ, ಅಂತಾರಾಷ್ಟ್ರೀಯ, ರಾಷ್ಟ್ರೀಯ ಸ್ವಿಮ್ಮಿಂಗ್ ಸ್ಪರ್ಧೆಯನ್ನು ಏರ್ಪಡಿಸಲು ಚಿಂತನೆ ಕೂಡ ನಡೆದಿದೆ. ಅನುಭವಿ ತರಬೇತುದಾರರು, ಜೀವ ರಕ್ಷಕರು, ಸಕ್ಷನ್ ಎಳೆಯುವವರು, ಸ್ವಚ್ಛತಾಗಾರರು, ಟಿಕೆಟ್ ಚೆಕ್ ಮಾಡುವವರು, ಭದ್ರತಾ ಸಿಬ್ಬಂದಿ ಸೇರಿದಂತೆ ಇತರರು ಕೆಲಸ ಮಾಡುತ್ತಿದ್ದಾರೆ. ಯಾರಿಗೂ ಅಪಾಯವಾಗದಂತೆ ನಿಗಾ ವಹಿಸಲಾಗಿದೆ. ಈಜುಕೊಳಕ್ಕೆ ಮೇಲ್ಛಾವಣಿ ನಿರ್ಮಿಸುವ ಕಾಮಗಾರಿ ಮುಗಿದಿದ್ದು ಬೇಸಿಗೆ, ಮಳೆ, ಚಳಿ ಎನ್ನದೇ ಈಜಲು, ಈಜುಪಟುಗಳು ಹಾಗೂ ಈಜು ಕಲಿಯುವವರು ಬರಬಹುದಾಗಿದೆ ಎಂದು ಮಾಹಿತಿ ನೀಡಿದರು.

## ಈ ಉಪಚುನಾವಣೆ ರಾಜ್ಯ ರಾಜಕೀಯದ ದಿಕ್ಸೂಚಿ ಅಲ್ಲ

# ಎರಡೂ ಸ್ಥಾನಗಳನ್ನು ನಾವೇ ಗೆಲ್ಲುತ್ತೇವೆ-ಚಲುವರಾಯಸ್ವಾಮಿ



**ದಾವಣಗೆರೆ,ಏ.4-**ಈ ಉಪಚುನಾವಣೆ ಯಾ ವುದೇ ದಿಕ್ಸೂಚಿ ಅಲ್ಲ. ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಎರಡು ಸ್ಥಾನ ನಮ್ಮವು, ನಾವು ಗೆಲ್ಲುತ್ತೇವೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ನಗರದಲ್ಲಿ ಮಾತನಾಡಿದ ಅವರು, ಮೂರು ಉಪಚುನಾವಣೆಯಲ್ಲಿ ಗೆದ್ದಿದ್ದೇವೆ. ವಿಶೇಷವಾಗಿ ನಾವು ಇಬ್ಬರು ಮಾಜಿ ಸಿಎಂ ಮಕ್ಕಳನ್ನು ಸೋಲಿಸಿದ್ದೇವೆ. ಈಗ ಇರುವ ಎರಡು ಸ್ಥಾನ ಗೆಲ್ಲುತ್ತೇವೆ.

ಕಾಂಗ್ರೆಸ್ ಕಿತ್ತೊಗೆಯಬೇಕು ಅಂತಾರೇ, ಕಿತ್ತೊಗೆಯಲು ಕಾಂಗ್ರೆಸ್ ಏನ್ ನಿಂಬೆ ಗಿಡನಾ?. ತಮಿಳುನಾಡಿನಲ್ಲಿ ಕರುಣಾನಿಧಿ ನಿಧನ ನಂತರ ಸ್ಟಾಲಿನ್ ಸಿಎಂ ಆದ್ರು. ಆದರೆ ಕುಮಾರಸ್ವಾಮಿ ಅವರ ತಂದೆ ಜೀವಂತ ಇರುವಾಗಲೇ ಎರಡು ಸಲ ಸಿಎಂ ಆಗಿದ್ದಾರೆ. ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ವಿರುದ್ಧ ವಾಗ್ದಾಳಿ ನಡೆಸಿದರು.

ಗ್ಯಾರಂಟಿಯಿಂದ ಅಭಿವೃದ್ಧಿ ಕುಂಠಿತವಾಗಿದೆ ಎಂದು ಸುಳ್ಳು ಅಪಪ್ರಚಾರ ಮಾಡಲಾಗುತ್ತಿದೆ. ಈ ವರೆಗೆ ಪ್ರತಿ ಶಾಸಕರಿಗೆ 80 ಕೋಟಿ ಹಣ ಸಿಎಂ ಈವರೆಗೆ ಬಿಡುಗಡೆ ಮಾಡಿದ್ದಾರೆ. 1.30 ಲಕ್ಷ ಕೋಟಿ ಹಣ ನೇರವಾಗಿ ರಾಜ್ಯದ ಜನತೆಯ ಖಾತೆಗೆ ಜಮಾ ಮಾಡಿದ್ದೇವೆ. ಇದರಲ್ಲಿ ಯಾವುದೇ ಮಧ್ಯವರ್ತಿಗಳ ಹಾವಳಿ ಇಲ್ಲ. ಕೇಂದ್ರ ಸರ್ಕಾರ ರಾಜ್ಯಕ್ಕೆ ಮಾಡಿದ ಅನ್ಯಾಯ ಬೇರೆ ರಾಜ್ಯಕ್ಕೆ ಆಗಿಲ್ಲ. ಬಿಜೆಪಿಯೇ ಇಲ್ಲದ ತಮಿಳುನಾಡಿಗೆ ಮಾಡಿದ ಸಹಾಯ ನಮಗೆ ಮಾಡಿಲ್ಲ. ಈ ಕಾರಣಕ್ಕೆ ಬಿಜೆಪಿಗೆ ಮತ ಕೇಳುವ ನೈತಿಕತೆ ಇಲ್ಲ ಎಂದರು.

ಅಳ್ಬೇಡಮ್ಮ ಅಂಗಡಿ ಇಟ್ಟು ಕೊಡುವೆ, ಭಿಕ್ಷೆ ಬೇಡಲು ಹೋಗ್ಬೇಡಾ ಎಂದ್ ಅಳುತ್ತಿದ್ದ ವೃದ್ಧೆ ಯನ್ನು ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಸಂತೈಸಿದ ಪರಿ ಇದು, ಇದಲ್ಲದೆ ಅಭಿಮಾನಿಯೊಬ್ಬರ ಆಸೆಯನ್ನು ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಈಡೇರಿಸಿದ ಘಟನೆ ನಡೆದಿದೆ.

ವೃದ್ಧೆಗೆ ಅಂಗಡಿ ಹಾಕಿಸಿಕೊಡುವುದಾಗಿ ಭರವಸೆ ನೀಡಿದ ಸಂಸದೆ: ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಅವರ ಪರವಾಗಿ ಮತಯಾಚಿಸುತ್ತಿದ್ದ ವೇಳೆ ಭಿಕ್ಷಾಟನೆ ಮಾಡುತ್ತಿದ್ದ ವೃದ್ಧೆಯೊಬ್ಬರ ಸಮಸ್ಯೆ ಆಲಿಸಿದ ಸಂಸದೆ ಪ್ರಭಾ ಮಲ್ಲಿಕಾರ್ಜುನ್, ವೃದ್ಧೆಯನ್ನು ಸಂತೈಸಿ ಜೀವನ ಸಾಗಿಸಲು ಅಂಗಡಿ ಹಾಕಿಕೊಡುವುದಾಗಿ ಭರವಸೆ ನೀಡಿದ್ದಾರೆ.

# ಕಾರ್ಮಿಕರ ಹಣದಲ್ಲಿ ಅವ್ಯವಹಾರ: ಭ್ರಷ್ಟ ಅಧಿಕಾರಿಗಳ ಬೆನ್ನಿಗೆ ನಿಂತ ಪೊಲೀಸರ ವಿರುದ್ಧ ಏ.10ಕ್ಕೆ ಸಿರವಾರ ಠಾಣೆ ಎದುರು ಪ್ರತಿಭಟನೆ-ಆರ್.ಮಾನಸಯ್ಯ

ಕನ್ನಡ ಮಾತೃ ಭೂಮಿ ವಾರ್ತೆ



**ಸಿರವಾರ,ಏ.04-**ತುಂಗಭದ್ರಾ ಕಾರ್ಮಿಕರು ದುಡಿದ 01 ಕೋಟಿ 10 ಲಕ್ಷ ರೂ. ಕೂಲಿ ಹಣವನ್ನು ದುರ್ಬಳಕೆ ಮಾಡಿಕೊಂಡು ಕೆಲಸ ಮಾಡಿದ ಕಾರ್ಮಿಕರಿಗೆ ವಂಚನೆ ಮಾಡಿದ ನೀರಾವರಿ ಇಲಾಖೆಯ ಪ್ರಭಾರಿ ಇಇ ವಿಜಯಲಕ್ಷ್ಮಿ ಪಾಟೀಲ್ ವಿರುದ್ಧ ದೂರು ನೀಡಿ ಸುಮಾರು 60 ದಿನಗಳಾ ದರೂ ಎಫ್.ಐ.ಆರ್ ದಾಖಲು ಮಾಡದೆ, ಕರ್ತವ್ಯ ಮರೆತು ಭ್ರಷ್ಟ ಅಧಿಕಾರಿಗಳ ಬೆನ್ನಿಗೆ ನಿಂತ ಸಿರವಾರ ಪೊಲೀಸ್ ಠಾಣೆಯ ಪಿಎಸ್‌ಐ ಹಾಗೂ ಸಿಪಿಐ ಇವರನ್ನು ಅಮಾನತುಗೊಳಿಸುವಂತೆ ಆಗ್ರಹಿಸಿ ಇದೇ ಏ.10 ರಂದು ಸಿರವಾರ ಪೊಲೀಸ್ ಠಾಣೆ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು, ತುಂಗಭದ್ರಾ ನೀರಾವರಿ ವಲಯ ಹಂಗಾಮಿ ಕಾರ್ಮಿಕ ಸಂಘ (ಟಿಯುಸಿಐ) ಅಧ್ಯಕ್ಷ ಆರ್.ಮಾನಸಯ್ಯ ರವರು ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತುಂಗಭದ್ರಾ ನೀರಾವರಿ ವಲಯ ಹಂಗಾಮಿ ಕಾರ್ಮಿಕ ಸಂಘ (ಟಿಯುಸಿಐ) ಸದಸ್ಯರಾದ ಮೃತ್ಯುಂಜಯ ತಂದೆ ಹನುಮಂತ ಗ್ಯಾಂಗ್ ಮ್ಯಾನ್ ಇವರು, ನೀರಾವರಿ ಇಲಾಖೆಯಲ್ಲಿ ಕಾರ್ಮಿಕರ ಹಣದಲ್ಲಿ 01 ಕೋಟಿ 10 ಲಕ್ಷ ರೂ. ಭ್ರಷ್ಟಚಾರ ನಡೆದಿರುವ ಕುರಿತು ಸಿರವಾರ ಠಾಣೆಗೆ ದೂರು ನೀಡಿ 60 ದಿನ ಕಳೆದರೂ ಸಹ ದೂರನ್ನು ದಾಖಲಿಸಿಕೊಳ್ಳದೆ ಮತ್ತು ಎಫ್.ಐ.ಆರ್ ವರದಿಯನ್ನು ನ್ಯಾಯಾಲಯಕ್ಕೆ ಕಳಿಸದೆ ನಿರ್ಲಕ್ಷ್ಯ ತೋರಿದ್ದು, ಈ ಬಗ್ಗೆ ಪಿರ್ಯಾಧಿದಾರ ಮೃತ್ಯುಂಜಯ ಇವರಿಗೆ ಯಾವುದೇ ಮಾಹಿತಿಯನ್ನು ಕೂಡ ನೀಡಿರುವುದಿಲ್ಲ ಎಂದು ಆರೋಪಿಸಿದರು.

ಸದರಿ ದೂರಿನಲ್ಲಿ ನೀರಾವರಿ ಇಲಾಖೆಯ ಪ್ರಭಾರಿ ಕಾರ್ಯಪಾಲಕ ಅಭಿಯಟತರರಾದ ವಿಜಯಲಕ್ಷ್ಮಿ ಪಾಟೀಲ್ ರವರು ಒಬ್ಬ ಅಧಿಕಾರಿಯಾಗಿ ಪೊಲೀಸ್ ಠಾಣೆಯ ಮೇಲೆ ಪ್ರಭಾವ ಬೀರಿ ತಮ್ಮ ಮೇಲೆ ಕಾರ್ಮಿಕರು ನೀಡಿದ ದೂರು ದಾಖಲಾಗದಂತೆ ನೋಡಿಕೊಂಡಿದ್ದಾರೆ. ಇದೇ ವಿಷಯಕ್ಕೆ ಸಂಬಂಧಿಸಿ ನಮ್ಮ ಸಂಘದ ಮುಖಂಡರು ಎಂಟತ್ತು ಬಾರಿ ಠಾಣೆಗೆ ಹೋಗಿ ವಿಚಾರಿಸಿದರೂ ಸಹ ಪ್ರಕರಣ ದಾಖಲಾಗಿಲ್ಲ. ಭಾರತೀಯ ನ್ಯಾಯ ಸಂಹಿತೆ (ಬಿ.ಎನ್.ಎಸ್) ಕಲಂ 316 ಹಾಗೂ 318ರ ಅನ್ವಯ ಗುರುತರ ಅಪರಾಧ ಎಸಗಿದ ಭ್ರಷ್ಟ ನೀರಾವರಿ ಇಲಾಖೆ ಅಧಿಕಾರಿಗಳ ಬೆಂಬಲಕ್ಕೆ ನಿಂತ ಪೊಲೀಸ್ ಅಧಿಕಾರಿಗಳನ್ನು ಕೂಡಲೇ ಅಮಾನತ್ತು ಮಾಡುವಂತೆ ಠಾಣೆಯ ಎದುರು ಪ್ರತಿಭಟನಾ ಧರಣಿ ನಡೆಸಲಾಗುವುದು ಎಂದರು.

ಮಾತು ಮಾತಿಗೂ ಹೊರಗುತ್ತಿಗೆ ಕಡೆ ಬೆರಳು ಮಾಡಿ ತೋರಿಸುವ ನೀರಾವರಿ ಇಲಾಖೆಯ ಇಂಜಿನಿಯರುಗಳು ಕಾರ್ಮಿಕರ ಕೆಲಸದ ಹಣವನ್ನು ಸಿವಿಲ್ ಗುತ್ತೇದಾರರ ಮೂಲಕ ಎತ್ತುವಳಿ ಮಾಡಿಕೊಂಡಿರುವುದಕ್ಕೆ ನಮ್ಮ ಬಳಿ ದಾಖಲೆಗಳಿವೆ. ಈ ದಾಖಲೆಗಳನ್ನು ಇಟ್ಟುಕೊಂಡು ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಕಾರ್ಮಿಕರ ವಿರೋಧಿ ಭ್ರಷ್ಟ ಅಧಿಕಾರಿಗಳ ವಿರುದ್ಧ ಹೋರಾಟ ಮಾಡುವುದಕ್ಕೆ ಸಂಘ ಸಿದ್ಧವಾಗಿದೆ ಎಂದು ಹೇಳಿದರು.

ತುಂಗಭದ್ರಾ ವಲಯ ಹಂಗಾಮಿ ಕಾರ್ಮಿಕರಿಗೆ ಬಾಕಿಯಿರುವ ಮೂರು ತಿಂಗಳ ವೇತನ ಪಾವತಿ ಮಾಡಬೇಕು, ಕಾರ್ಮಿಕರ ಹಣದಲ್ಲಿ ಮಾನವ ಸಂಪನ್ಮೂಲಗಳಿಂದ ಕೆಲಸ ಮಾಡಿಸದೆಯೇ 01 ಕೋಟಿ 10 ಲಕ್ಷ ರೂ. ಹಣ ಎತ್ತುವಳಿ ಮಾಡಿರುವ ನೀರಾವರಿ ಇಲಾಖೆಯ ಅಧಿಕಾರಿಗಳ ಮೇಲೆ ದೂರು ದಾಖಲಿಸಿ ಸೂಕ್ತ ಕ್ರಮ ಕೈಗೊಳ್ಳವುದು ಸೇರಿದಂತೆ ಇತರೆ ಬೇಡಿಕೆಗಳನ್ನು ಕೂಡಲೇ ಸಂಬಂಧಪಟ್ಟ ಇಲಾಖೆಯ ಮೇಲಾಧಿಕಾರಿಗಳು ಈಡೇರಿಸಬೇಕು, ಇಲ್ಲದಿದ್ದರೆ ಹೋರಾಟ ಮಾಡುವುದು ಪಕ್ಕಾ ಎಂದರು.

ಈ ಸಂದರ್ಭದಲ್ಲಿ ಟಿಯುಸಿಐ ರಾಜ್ಯ ಕಾರ್ಯದರ್ಶಿ ಎಂ.ಗಂಗಾಧರ, ಪ್ರಧಾನ ಕಾರ್ಯದರ್ಶಿ ಜಿ.ಅಡವಿ ರಾವ್, ಅಮರೇಗೌಡ ಲಕ್ಕಟದಿನ್ನಿ, ರುಕ್ಕಪ್ಪ ಮಾಡಗಿರಿ, ರಾಮಣ್ಣ ಪೋತ್ನಾಳ, ಶರಣಪ್ಪ ಕವಿತಾಳ, ಹನುಮಂತ ಅಂಬಿಗೇರ ಸಿರವಾರ, ಮಹೇಶ್ ಸಿರವಾರ, ರಮೇಶ ಸಿರವಾರ, ಸಿದ್ದಪ್ಪ ಗೌಡ ಗಿಲ್ಲೆಸೂಗೂರು, ಹುಲಿಗೆಪ್ಪ ಕೊಟ್ನೆಕಲ್, ಹನುಮಂತಪ್ಪ ಸಿಂಧನೂರು, ಬಸವರಾಜ ಸಿಂಧನೂರು, ಮುದುಕಪ್ಪ ಅತ್ತನೂರು, ಮೌನೇಶ ಗೊಲ್ಲದಿನ್ನಿ ಸೇರಿದಂತೆ ಇತರೆ ಕಾರ್ಮಿಕರು ಇದ್ದರು.




**ರಾಯಚೂರು ತಾಲೂಕಿನ ಮನ್ಸಲಾಪುರ ಗ್ರಾಮದಲ್ಲಿ ಗುರುವಾರ ಹುಣ್ಣಿಮೆಯಂದು ಸಂಜೆ ಶ್ರೀ ಹೂವಿನ ತೋಟದ ಆಂಜನೇಯ ಸ್ವಾಮಿಯ ರಥೋತ್ಸವ ವಿಜೃಂಭಣೆಯಿಂದ ಜರುಗಿತು.**

## ಏ.5ಬಾಬು ಜಗಜೀವನರಾಮ್ ರವರ 119ನೇ ಜನ್ಮದಿನಾಚರಣೆ

ಕನ್ನಡ ಮಾತೃ ಭೂಮಿ ವಾರ್ತೆ

**ಕನಕಗಿರಿ, ಏ.3-**ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತ್, ಪಟ್ಟಣ ಪಂಚಾಯತ್ ಕನಕಗಿರಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಗಂಗಾವತಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನರಾಮ್ ರವರ 119ನೇ ಜನ್ಮದಿನಾಚರಣೆಯನ್ನು ಏ.5, ಭಾನುವಾರದಂದು ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲಾಗಿದ್ದು,



ನಾಳೆ ಬೆಳಗ್ಗೆ 8 ಗಂಟೆಗೆ ಬಾಬು ಜಗಜೀವನ್ ರಾಮ್ ರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ನಂತರ ಮೆರವಣಿಗೆ, ಹಾಗೂ ವೇದಿಕೆ ಕಾರ್ಯಕ್ರಮ ನಡೆಸಲಾಗುವುದು ಎಂದು ತಹಶೀಲ್ದಾರ್ ವಿಶ್ವನಾಥ ಮುರುಡಿ ಹೇಳಿದರು.

## ಗುಡ್ಡೆವಾಡಿಯ ರಾಜಕುಮಾರ ಉಕಲಿಗೆ ಒದಗಿದ ಸಿ.ಎಂ ಪಾರಿತೋಷಕ

ಕನ್ನಡ ಮಾತೃ ಭೂಮಿ ವಾರ್ತೆ



**ಕಲಬುರಗಿ,ಏ.04-**ಜಿಲ್ಲೆಯ ಅಫಜಲಪುರ ತಾಲೂಕಿನ ಗುಡ್ಡೆವಾಡಿ ಗ್ರಾಮದ ಬಡ ಕುಟುಂಬ ದಲ್ಲಿ ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡಿ ಇಂದು ಪಿಎಸ್‌ಐ ಆಗಿ ಸೇವೆ ಸಲ್ಲಿಸುತ್ತಿರುವುದು ಜಿಲ್ಲೆಯ ಜನರಿಗೆ ತಿಳಿದಿರುವ ವಿಷಯ.ಆದರೆ ಇತ್ತಿಚೆಗೆ ಬೆಂಗಳೂರಿನಲ್ಲಿ ನಡೆದ ಪೊಲೀಸ್ ಧ್ವಜ ದಿನಾಚರಣೆ ನಿಮಿತ್ಯ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳಿಂದ ಗೌರವಿಸಲ್ಪಡುವ ಸಿ.ಎಂ ಪದಕ ಗೌರವವನ್ನು ತಾಲೂಕಿನ ಹೆಮ್ಮೆಯ ಸಾಧಕರತ್ನ ಪಿಎಸ್‌ಐ ರಾಜಕುಮಾರ ಉಕಲಿ ಅವರಿಗೆ ಲಭಿಸಿರುವುದು ತಾಲೂಕಿನ ಜನರಲ್ಲಿ ಸಂತಸ ಮನೆ ಮಾಡಿದೆ.

ಅಫಜಲಪುರ ತಾಲೂಕಿನ ಗುಡ್ಡೆವಾಡಿ ಗ್ರಾಮದ ಸಿದ್ದರಾಮ ಉಕಲಿ ಅವರ ಮಗನಾದ ಇವರು ಕಲಬುರಗಿ ನಗರದ ಪ್ರತಿಷ್ಠಿತ ಕಾಲೇಜಿನಲ್ಲಿ ಬಿಬಿಎಮ್ ಪದವಿ ಪಡೆದು ನಂತರ ಪಿಎಸ್‌ಐ ಹುದ್ದೆಗೆ ಆಯ್ಕೆಯಾಗಿದ್ದಾರೆ. ರಾಜ್ಯದ ಪ್ರತಿಷ್ಠಿತ ಪೊಲೀಸ್ ಠಾಣೆಗಳಲ್ಲಿ ಪಿಎಸ್‌ಐ ಆಗಿ ಸೇವೆ ಸಲ್ಲಿಸಿದ ರಾಜಕುಮಾರ ಉಕಲಿ ಮೊದಲು ಬೆಂಗಳೂರು ನಗರದ ಕೆಂಪೇಗಡ ಪೊಲೀಸ್ ಠಾಣೆ, ಸಿದ್ದಾಪುರ ಪೊಲೀಸ್ ಠಾಣೆ,ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಪೊಲೀಸ್ ಠಾಣೆ, ಧಾರವಾಡ ಜಿಲ್ಲೆಯ ಹಳಿಯಾಳ ಪೊಲೀಸ್ ಠಾಣೆ,ಶಿರಸಿ ಪೊಲೀಸ್ ಠಾಣೆ ಸೇರಿದಂತೆ ರಾಜ್ಯದ ಹಲವು ಪೊಲೀಸ್ ಠಾಣೆಗಳಲ್ಲಿ ಪಿಎಸ್‌ಐ ಆಗಿ ಸೇವೆ ಸಲ್ಲಿದ್ದಾರೆ.

ವಿಶೇಷವಾಗಿ ರಾಜ್ಯದ ಹೆಸರಾಂತ ಪ್ರತಿಷ್ಠಿತ ತನಿಖಾ ಸಂಸ್ಥೆಯಾದ ಎಸ್.ಐ.ಟಿ ಯಲ್ಲೂ ಕಾರ್ಯ ನಿರ್ವಹಿಸಿದ್ದಾರೆ.ರಾಜ್ಯದ ಪ್ರಮುಖ ಠಾಣೆಗಳ ಹಳೆಯ ಪ್ರಕರಣಗಳ ತನಿಖೆ ಸೇರಿದಂತೆ ಕಾಣೆಯಾಗಿರುವ ಹಳೆಯ ಪ್ರಕರಣಗಳನ್ನು ಭೇದಿಸಿದ್ದಾರಡ.ಕಳ್ಳತನ ದರೋಡೆ ಪ್ರಕರಣಗಳನ್ನು ಸೂಕ್ಷ್ಮವಾಗಿ ಅತಿ ಕಡಿಮೆ ಸಮಯದಲ್ಲಿ ಭೇದಿಸಿದ್ದಕ್ಕಾಗಿ ಅವರಿಗೆ ರಾಜ್ಯ ಸರಕಾರ ಕೊಡಮಾಡಲ್ಪಡುವ ಸಿ.ಎಂ ಪದಕದ ಗೌರವ ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರಿಂದ ದೊರೆತಿದೆ.ಇದು ತಾಲೂಕಿನ ಜನರ ಹೆಮ್ಮೆ ಹಾಗೂ ಗೌರವ ಸೂಚಕ ಸಂಕೇತವಾಗಿದೆ.

ಅಫಜಲಪುರ ತಾಲೂಕು ಎಂದರೆ ಕೆಟ್ಟ ಹಣೆ ಪಟ್ಟಿ ಕಟ್ಟಿ ಬೇರೊಂದು ರೀತಿಯಲ್ಲಿ ನೋಡುವ ಜನರಿಗೆ ಈ ರೀತಿಯ ಸಾಧನೆಗಳು ಉತ್ತರವಾಗಲಿವೆ. ಭೀಮೆಯ ಸೀಮೆ ಸಾಧಕರ ಹಿರಿಮೆ ಎನ್ನುವುದು ಪಿಎಸ್‌ಐ ರಾಜಕುಮಾರ ಉಕಲಿ ಅವರ ಈ ಸಾಧನೆ ಉದಾಹರಣೆಯಾಗಿದೆ.

## ಮಕ್ಕಳ ಕೈಗೆ ಮೊಬೈಲ್ ಬದಲಾಗಿ ಪುಸ್ತಕ ಕೊಡಿ - ಕಂಬಳೇಶ್ವರ ಶ್ರೀಗಳು

ಕನ್ನಡ ಮಾತೃ ಭೂಮಿ ವಾರ್ತೆ

**ಚಿತ್ತಾಪುರ, ಏ.04-** ಮಕ್ಕಳ ಕೈಗೆ ಮೊಬೈಲ್‌ಗಳನ್ನು ಕೊಡುವ ಬದಲಾಗಿ ಪುಸ್ತಕಗಳನ್ನು ಕೊಡಿ ಎಂದು ಕಂಬಳೇಶ್ವರ ಮಠದ ಸೋಮ ಶೇಖರ ಶಿವಾಚಾರ್ಯರು ಹೇಳಿದರು.




ಪಟ್ಟಣದ ಮಾತೋಶ್ರೀ ಕಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಹಮ್ಮಿಕೊಂಡಿದ್ದ 15ನೇ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ಸರಸ್ವತಿ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದ ಬಳಿಕ ಆಶೀರ್ವಚನ ನೀಡಿದ ಅವರು, ಮೊಬೈಲ್‌ಗಳನ್ನು ಕೊಟ್ಟರೆ ಮಕ್ಕಳ ಭವಿಷ್ಯ ಹಾಳಾಗುತ್ತದೆ. ಅದೇ ಪುಸ್ತಕಗಳನ್ನು ಕೊಟ್ಟರೆ ಭವಿಷ್ಯ ಉಜ್ವಲವಾಗುತ್ತದೆ ಎಂದರು.

ಶಿಕ್ಷಣ ಸಂಸ್ಥೆಯೊಂದನ್ನು ನಡೆಸುವುದು ಹತ್ತು ಆನೆಗಳನ್ನು ಸಾಕಿದಂತೆ. ದೇಶದ ಭವಿಷ್ಯ ರೂಪಿಸುವ ಅತಿದೊಡ್ಡ ಶಕ್ತಿ ಶಾಲೆಗಳಲ್ಲಿದೆ, ಎಂದು ಡ ಮಕ್ಕಳ ಶಿಕ್ಷಣಕ್ಕಾಗಿ ಶ್ರಮಿಸುತ್ತಿರುವ ಮಾತೋಶ್ರೀ ಶಾಲೆಯ ಕಾರ್ಯ ಶ್ಲಾಘನೀಯ. ಪಾಲಕರು ಮಕ್ಕಳಿಗೆ ಮೊಬೈಲ್ ನೀಡಿ ಅವರ ಭವಿಷ್ಯ ಹಾಳು ಮಾಡಬಾರದು.

ಅದರ ಬದಲಾಗಿ ಪುಸ್ತಕಗಳನ್ನು ನೀಡಿ ಅವರ ಬದುಕನ್ನು ಸಾರ್ಥಕಗೊಳಿಸಬೇಕು ಎಂದು ಅವರು ಕಿವಿಮಾತು ಹೇಳಿದರು.

ಮುಖ್ಯ ಅತಿಥಿಗಳಾಗಿದ್ದ ಪಿಎಲ್‌ಡಿ ಬ್ಯಾಂಕ್ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಭೀಮಣ್ಣ ಸಾಲಿ ಅವರು ಮಾತನಾಡಿ, ಹಿಂದುಳಿದ ಪ್ರದೇಶದ ಬಡ ಮಕ್ಕಳಿಗಾಗಿ ಶಿಕ್ಷಣ ಸಂಸ್ಥೆ ನಡೆಸುತ್ತಿರುವುದು ಪುಣ್ಯದ ಕೆಲಸ. ಇಂತಹ ಸಂಸ್ಥೆಗಳಿಗೆ ಸಾರ್ವಜನಿಕರ ಸಹಕಾರ ಅತ್ಯಗತ್ಯ. ಮುಂಬರುವ ದಿನಗಳಲ್ಲಿ ಶಾಲೆಯ ಅಭಿವೃದ್ಧಿಗೆ ವೈಯಕ್ತಿಕವಾಗಿ ಬೆಂಬಲ ನೀಡಲಾಗುವುದು ಎಂದು ಭರವಸೆ ನೀಡಿದರು.


ಶಾಲೆಯ ಮುಖ್ಯಗುರುಗಳಾದ ಜಗದೇವ ಕುಂಬಾರ್ ಅವರು ವಾರ್ಷಿಕ ವರದಿ ವಾಚಿಸಿ, 2025-26ನೇ ಸಾಲಿನಲ್ಲಿ ಶಾಲೆಯು ಅತ್ಯುತ್ತಮ ಫಲಿತಾಂಶ ಪಡೆದಿದೆ.

ಮಕ್ಕಳಲ್ಲಿ ಕೌಶಲ ಬೆಳೆಸಲು ನಿರಂತರ ಕಲಿಕೆ ಎಂಬ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದೆ. ಶಿಕ್ಷಕರ ಅವಿರತ ಶ್ರಮದಿಂದ ಶಾಲೆಯು ಪ್ರಗತಿಯ ಪಥದಲ್ಲಿ ಸಾಗುತ್ತಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ವೀರೇಂದ್ರ, ಕೊಲ್ಲೂರ್, ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘದ ಅಧ್ಯಕ್ಷ ರೇವಣಸಿದ್ದಪ್ಪ ರೋಣದ್, ಪ್ರಗತಿ ಪರ ರೈತ ಅಂಬರೀಶ್ ಕಲ್ಲಶೆಟ್ಟಿ, ಮಾಜಿ ಪುರಸಭೆ ಸದಸ್ಯ ವಿಶ್ವನಾಥ ಕಾಶಿ, ಪತ್ರಕರ್ತ ಚಂದ್ರಶೇಖರ ಬಳ್ಳಾ, ಕೋಲಿ ಸಮಾಜ ನಗರ ಅಧ್ಯಕ್ಷ ಬಸವರಾಜ್ ಮೈನಾಳಕರ್ ಅವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಶಿಕ್ಷಕರಾದ ಅಂಬರೀಶ್ ಭೋವಿ, ವಿಶ್ವನಾಥ ಕುಂಬಾರ್, ಶೇಷಪ್ಪ ಬಡಿಗೇರ್, ಕಾಸಿಂ ಅಲಿ,ಫೈಮುದ್ ಬೇಗಂ, ಸುಜಾತಾ ಜೆ ಕುಂಬಾರ್, ಸುನಿತಾ, ಶಮರಿನ್ ಬೇಗಂ, ಶ್ರೀದೇವಿ ಮುಂತಾದವರು ಉಪಸ್ಥಿತರಿದ್ದರು. ಶಿಕ್ಷಕ ನರಸಪ್ಪ ಚಿನ್ನಕಟ್ಟಿ ಅವರು ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮ ನಂತರ ಶಾಲೆಯ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ನೃತ್ಯ, ನಾಟಕ, ನಡೆದವು ನೃತ್ಯಗಳು ಪಾಲಕರ ಕಣ್ಮನ ಸೆಳೆದವು.

## ಛತ್ತರಾಂಜನೇಯ ಮಹಾರಥೋತ್ಸವ



ಕನ್ನಡ ಮಾತೃ ಭೂಮಿ ವಾರ್ತೆ

**ಮುದಗಲ್,ಏ.04-**ಪಟ್ಟಣ ಸಮೀಫದ ಛತ್ತರ ಗ್ರಾಮದ ಆರಾದ್ಯ ದೈವ ಛತ್ತರಾಂಜ ನೇಯ ಜಾತ್ರಾ ಮಹೋತ್ಸವವು ಗುರುವಾರ ಸಡಗರ ಸಂಭ್ರಮದಿಅದ ಜರುಗಿತು. ಗುರುವಾರ ಸಂಜೆ ಏಳು ಘಂಟೆಗೆ ಸಕಲ ವಾದ್ಯ ಮೇಳಗಳೊಂದಿಗೆ ಕಳಶಗಳನ್ನು ಗ್ರಾಮದ ಪ್ರಮುಖ ಬೀದಿ ಗಳಲ್ಲಿ ಮೆರವಣಿಗೆ ಮಾಡುತ್ತಾ ಲಕ್ಷಾಂ ತರ ಭಕ್ತಗಣದ ಮಧ್ಯೆ ಮಹಾರ ಥೋತ್ಸವ ವೈಭವದಿಂದ ಜರುಗಿತು. ಇಷ್ಟಾರ್ಥ ಸಿದ್ಧಿಗಾಗಿ ಭಕ್ತರು ಮಹಾರ ಥೋತ್ಸವದಲ್ಲಿ ತೇರಿಗೆ ಉತ್ತತ್ತಿ, ಹಣ್ಣು, ಕಾಯಿ ಸಮರ್ಪಣೆ ಮಾಡಿ ಪ್ರಾರ್ಥಿಸಿ ದರು. ಪಟ್ಟಣ ಮಾತ್ರವಲ್ಲದೇ ನೆರೆ ಜಿಲ್ಲೆಗಳಾದ ಬಳ್ಳಾರಿ, ಬಾಗಲಕೋಟೆ, ಕೊಪ್ಪಳ ವಿಜಯನಗರ ಜಿಲ್ಲೆಗಳಿಂದಲೂ ಸಾಕಷ್ಟು ಭಕ್ತರು ಜಾತ್ರಾ ಮಹೋತ್ಸ ವದಲ್ಲಿ ಭಾಗಿಯಾಗಿದ್ದರು. ಜಾತ್ರಾ ಮಹೋತ್ಸವದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ ವ್ಯವಸ್ಥೆ ಕಲ್ಪಿಸಲಾಗಿತ್ತು.

## ಲಾಭಕ್ಕಾಗಿ ಶಿಕ್ಷಣ ಸಂಸ್ಥೆಗಳನ್ನು ಮಾಡಬೇಡಿ, ಸೇವಾ ಮನೋಭಾವನೆಯ ದೃಷ್ಟಿಯಿಂದ ಸಂಘ ಸಂಸ್ಥೆ ಮಾಡಿ-ಬಯ್ಯಾಪೂರ

ಕನ್ನಡ ಮಾತೃ ಭೂಮಿ ವಾರ್ತೆ

**ಲಿಂಗಸಗೂರು,ಏ.04-**ಇಂದಿನ ಶೈಕ್ಷಣಿಕ ಪೈಪೋಟಿಗಳ ಮಧ್ಯೆ ಸಾರ್ವಜನಿಕ ಖಾಸಗಿ ಶಿಕ್ಷಣ ಸಂಸ್ಥೆ ಗಳನ್ನು ನಡೆಸುವುದು ಸುಲಭವಲ್ಲಾ. ಅನೇಕ ಸವಾಲುಗಳನ್ನು ಎದುರಿಸಿ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಡೆಸಬೇಕಾಗಿದೆ. ಯಾವತ್ತೂ ಲಾಭಕ್ಕಾಗಿ ಶಿಕ್ಷಣ ಸಂಸ್ಥೆಗ ಳನ್ನು ಮಾಡಬೇಡಿ ಸಾರ್ವಜನಿಕವಾಗಿ ಸೇವಾ ಮನೋಭಾವನೆಯ ದೃಷ್ಟಿಯಿಂದ ಸಂಘ ಸಂಸ್ಥೆಗಳನ್ನು ಮಾಡಿ ಎಂದು ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಅಮರೇಗೌಡ ಪಾಟೀಲ್ ಬಯ್ಯಾಪೂರ ಹೇಳಿದರು.



ಪಟ್ಟಣದ ಬಸವೇಶ್ವರ ಸ್ವತಂತ್ರ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಬೆಳ್ಳಿ ಸಂಭ್ರಮದ ಸವಿನೆನಪು, ಕಲ್ಯಾಣ ಮತ್ತು ಕಾಯಕ ಗ್ರಂಥಗಳ ಲೋಕಾರ್ಪಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಯಾವುದೇ ಸರ್ಕಾರ ಬರಲಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಇನ್ನು ಮುಂದೆ ಸಹಾಯ ಮಾಡುವುದಿಲ್ಲ ಸಂಸ್ಥೆಗಳನ್ನು ನಡೆಸಲು ಸೇವಾ ಮನೋಭಾವ ಬೇಕಾಗಿದೆ. ಸಮಾಜ ಸೇವೆಗಾಗಿ ಸಮಾಜಕ್ಕೆ ಸಂಸ್ಕಾರ ಕೊಡಬೇಕೆಂಬ ಭಾವನೆಯನ್ನು ಇಟ್ಟುಕೊಂಡು ಸಂಸ್ಥೆಗಳು ಮುಂದೆ ಬರಬೇಕು.

ಒಬ್ಬರ ಪ್ರಯತ್ನದಿಂದ ಮಾತ್ರ ಯಾವುದೇ ಸಂಘ ಸಂಸ್ಥೆಗಳು ಬೆಳೆಯಲು ಸಾಧ್ಯವಿಲ್ಲ ಎಲ್ಲರ ಪ್ರಯತ್ನ ಅತ್ಯವಶ್ಯಕವಾಗಿದ್ದು ಮುಖ್ಯವಾಗಿ ಶಿಕ್ಷಣ ಸಂಸ್ಥೆಗಳು ಬೆಳೆಯಲು ಶಿಕ್ಷಕರ ಶ್ರಮ ಅಗಾಧವಾಗಿದೆ. ಶಿಕ್ಷಕರಿಂದ ಶಿಕ್ಷಣ ಮತ್ತು ಸಂಸ್ಕಾರ ಪಡೆದ ವಿದ್ಯಾರ್ಥಿಗಳು ಸಹ ತಮ್ಮನ್ನು ಬೆಳೆಸಿದ ಶಿಕ್ಷಕರ ಹಾಗೂ ಸಂಸ್ಥೆಯ ಹೆಸರನ್ನು ಉಳಿಸಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕಾಗಿದೆ.

ವಿ ವಿ ಸಂಘದ ಬೆಳ್ಳಿ ಸಂಭ್ರಮದ ಸವಿ ನೆನಪು ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಸಿ ಯಶಸ್ವಿಗೆ ಕಾರಣರಾದ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುವುದಾಗಿ ಅವರು ತಿಳಿಸಿದರು.

ವಿ.ವಿ ಸಂಘದ ಆಡಳಿತಾಧಿಕಾರಿ ಬಸವಂತರಾಯ ಕುರಿ ಪ್ರಾಸ್ತಾವಿಕವಾಗಿ ಮಾತನಾಡಿ ಇಂದಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಸಂಸ್ಥೆಗಳನ್ನು ಕಟ್ಟುವ ಪರಂಪರೆ ಮುಚ್ಚಿ ಹೋಗಿದ್ದು ಈಗೇನಿದ್ದರೂ ಸಹ ಟ್ರಸ್ಟ್ ಗಳನ್ನು ಕಟ್ಟುವ ಪರಂಪರೆ ಮುಂದುವರೆದಿದೆ. ಶೈಕ್ಷಣಿಕ ವ್ಯವಸ್ಥೆ ವ್ಯಾಪಾರೀಕರಣವಾದ ಮೇಲೆ ಅದನ್ನು ಅರ್ಥೈಸಿಕೊಳ್ಳುವ ಮನಸ್ಸುಗಳು ಅಲ್ಲಲ್ಲಿ ಕುಸಿಯುತ್ತಿವೆ. ಕುಸಿಯುವ ಈ ದಿನಗಳಲ್ಲಿ ಅವುಗಳಿಗೆ ಜೀವ ತುಂಬುವ ಹಾದಿಯಲ್ಲಿ ವೀರಶೈವ ವಿದ್ಯಾವರ್ಧಕ ಸಂಘ ಕಾರ್ಯ ನಿರ್ವಹಿಸುತ್ತಿದೆ.

ಇಂತಹ ಕಾರ್ಯಗಳು ಈ ನೆಲದ ಸ್ಪೂರ್ತಿಯಾಗಬೇಕು ಈ ನೆಲದ ಸಾಲು ಸಾಲು ಶೈಕ್ಷಣಿಕ ಸಮಸ್ಯೆಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟ ಚಿಂತಕರ ಲೇಖನಗಳು ಕರ್ನಾಟಕ ಸರ್ಕಾರಕ್ಕೆ ಮಾರ್ಗದರ್ಶಿಯಾಗುವ ರೀತಿಯಲ್ಲಿವೆ. ಈ ಲೇಖನಗಳನ್ನು ಸುಮಾರು 5 ವರ್ಷಗಳ ಹಿಂದೆ ನಾವು ಲೋಕಾರ್ಪಣೆ ಮಾಡಿದ್ದೇವೆ.

ಸಾರ್ವಜನಿಕರ ಸೇವೆಗಾಗಿ ಸ್ಥಾಪಿತವಾದ ವೀರಶೈವ ವಿದ್ಯಾವರ್ಧಕ ಸಂಘ ಇದು ಒಂದು ಸಂಸ್ಥೆ ಯಾಗಿದ್ದು ಇದು ಯಾವುದೇ ರೀತಿಯ ಟ್ರಸ್ಟ್ ಅಲ್ಲ. ಇದು ಒಬ್ಬ ವ್ಯಕ್ತಿಯ ಲಾಭಕ್ಕಾಗಿ ಹುಟ್ಟಿದ ವ್ಯವಸ್ಥಿತ ಸಂಸ್ಥೆಯಲ್ಲಾ. ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಇಂದಿನ ಕಷ್ಟಕಾಲದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ25 ವರ್ಷಗಳನ್ನು ಯಶಸ್ವಿಗೊಳಿಸಿ ಬೆಳ್ಳಿ ಸಂಭ್ರಮಾಚರಣೆ ಆಚರಿಸಿಕೊಂಡ ಈ ಸಂಸ್ಥೆ ನಿಜಕ್ಕೂ ಸಮಾಜಕ್ಕೆ ಮಾದರಿಯನಿಸಿಕೊಂಡಿದೆ.

ಸಂಸ್ಥೆಯ ಬೆಳವಣಿಗೆಗೆ ಪ್ರತಿಯೊಬ್ಬರ ಸಹಾಯ ಸಹಕಾರ ಅತ್ಯವಶ್ಯಕವಾಗಿದ್ದು ನಮ್ಮ ಮನೆಗಳು ದೊಡ್ಡದಾಗಿದ್ದರೆ ಸಾಲದು, ನಮ್ಮ ಮನಸ್ಸುಗಳು ಚಿಕ್ಕದಾಗಿರದೆ ದೊಡ್ಡದಾಗಿರಬೇಕು. ಸಂಸ್ಥೆಯ ಬೆಳ್ಳಿ ಸಂಭ್ರಮಕ್ಕೆ ಕಾರಣೀಕರ್ತರಾದ ಪ್ರತಿಯೊಬ್ಬರಿಗೂ ಅಭಿನಂದನೆಗಳನ್ನು ಸಲ್ಲಿಸಲೇಬೇಕು. ವಿವಿ ಸಂಘವು ಮುಂಬರುವ ದಿನಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಇನ್ನು ಹೆಚ್ಚು ಸಮಾಜ ಸೇವೆ ಮಾಡುವ ಅವಕಾಶ ದೊರೆಯುವ ರೀತಿಯಲ್ಲಿ ತಾವೆಲ್ಲರೂ ಸಹಕಾರ ನೀಡಬೇಕಾಗಿದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಭೂಪನಗೌಡ ಪಾಟೀಲ್ ಕರಡಕಲ್, ಸಂಸ್ಥೆಯ ಉಪಾಧ್ಯಕ್ಷ ಮಲ್ಲೇಶಗೌಡ ಮಟ್ಟೂರ, ಭೀಮನಗೌಡ ಪಾಟೀಲ್, ಪ್ರಾಚಾರ್ಯರಾದ ವೀರೇಶ್ ಪವಾರ, ಅಮರೇಗೌಡ, ಕಲ್ಲಯ್ಯ ಸ್ವಾಮಿ, ಸೂಗರೆಡ್ಡಿ ಮೇಟಿ, ಅಮರೇಗೌಡ ಬಾಗೂರು, ಮಹಾಂತಗೌಡ ಅನುಸೂಯ ಪ್ರಿಯಾಂಕಾ ಸೇರಿದಂತೆ ಇತರರಿದ್ದರು.

ಪ್ರಾಚಾರ್ಯರಾದ ಬಸವರಾಜ್ ಮೇಟಿ ಸ್ವಾಗತಿಸಿದರು, ಉಪನ್ಯಾಸಕ ಕಣುಮೇಶ ಕಾರ್ಯಕ್ರಮ ನಿರೂಪಿಸಿದರು ಕೊನೆಯಲ್ಲಿ ಉಪನ್ಯಾಸಕ ದೊಡ್ಡನಗೌಡ ವಂದನಾರ್ಪಣೆ ಮಾಡಿದರು.

# ಕೃಷಿ ಪಂಪಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆಗೆ ರೈತರ ಆಗ್ರಹ

ಕನ್ನಡ ಮಾತೃ ಭೂಮಿ ವಾರ್ತೆ



**ಕಾಳಗಿ,ಏ.04-** ಪಟ್ಟಣದ ಕಾಳಗಿ ವಿದ್ಯುತ್ ಉಪ ವಿಭಾಗ ವ್ಯಾಪ್ತಿಯ ರೈತರ ಕೃಷಿ ಪಂಪಸೆ ಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ನೀಡುವಂತೆ ಆಗ್ರಹಿಸಿ ಬುಧವಾರ ಭಾರ ತೀಯ ಕಿಸಾನ್ ಸಂಘದ ನೇತೃತ್ವದಲ್ಲಿ ರೈತರು ಜೆಸ್ಕಾಂ ಎಇಇ ಇಲ್ಯಾಸ್ ಅಹ್ಮದ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಈ ವೇಳೆ ರೈತರು ಮಾತನಾಡಿ, ಕೃಷಿ ಪಂಪಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಇಲ್ಲದ ಕಾರಣ ಬೆಳೆಗಳು ಒಣಗುತ್ತಿದ್ದು, ವಿಶೇಷವಾಗಿ ಕಬ್ಬು ಬೆಳೆ ಹಾನಿಗೊಳಗಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಹಗಲು ಹೊತ್ತಿನಲ್ಲಿ 7 ಗಂಟೆಗಳ ತ್ರೀಫೇಸ್ ವಿದ್ಯುತ್ ಪೂರೈಕೆ ಮಾಡುವ ನಿಯಮವಿದ್ದರೂ, ಸರಿಯಾಗಿ ವಿದ್ಯುತ್ ನೀಡಲಾಗುತ್ತಿಲ್ಲ ಎಂದು ದೂರಿದರು.

ಸರ್ಕಾರದ ಆದೇಶದಂತೆ ಹಗಲು ವೇಳೆಯಲ್ಲಿ ಪಂಪಸೆಟ್‌ಗಳಿಗೆ ಏಳು ಗಂಟೆಗಳ ತ್ರೀಫೇಸ್ ಹಾಗೂ ರಾತ್ರಿ ವೇಳೆ ತೋಟದ ಮನೆಗಳಿಗೆ ಸಿಂಗಲ್ ಫೇಸ್ ವಿದ್ಯುತ್ ಪೂರೈಕೆ ಮಾಡಬೇಕು. ವಿದ್ಯುತ್ ವ್ಯತ್ಯಯವಾಗುವ ಸಂದರ್ಭಗಳಲ್ಲಿ ತೆಗೆದುಕೊಳ್ಳುವ ಸಮಯವನ್ನು ಹೆಚ್ಚುವರಿಯಾಗಿ ಪೂರೈಕೆ ಮಾಡಬೇಕು ಎಂದು ಆಗ್ರಹಿಸಿದರು.

ಇದಲ್ಲದೆ, ಕಾಳೇಶ್ವರ ದೇವಸ್ಥಾನದ ಹಿಂಭಾಗದ ಕ್ಯಾನಲ್ ರಸ್ತೆಯಲ್ಲಿ ಸುಮಾರು 1415 ವಿದ್ಯುತ್ ಕಂಬಗಳು ಬಾಗಿದ್ದು ಅಪಾಯದ ಹಂತದಲ್ಲಿವೆ. ಅವುಗಳನ್ನು ತಕ್ಷಣ ದುರಸ್ತಿ ಮಾಡಿ, ಜೋತು ಬಿದ್ದಿರುವ ತಂತಿಗಳನ್ನು ಸರಿಪ ಡಿಸಬೇಕು. ಭರತನೂರ ರಸ್ತೆ ಮಾರ್ಗ ದಲ್ಲಿ ಅಪಾಯಕಾರಿಯಾಗಿ ಇರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ನ್ನು ಸ್ಥಳಾಂ ತರಿಸಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಸ್ಪಂದಿಸಿದ ಜೆಸ್ಕಾಂ ಎಇಇ ಇಲಿಯಾಸ್ ಅಹ್ಮದ್ ಅವರು, ರೈತರಿಗೆ ಯಾವುದೇ ವಿದ್ಯುತ್ ಸಮಸ್ಯೆ ಉಂಟಾದರೆ ತಕ್ಷಣ ಗಮನಕ್ಕೆ ತರಲು ಸೂಚಿಸಿ, ಎರಡು ದಿನಗಳಲ್ಲಿ ಬಾಗಿರುವ ವಿದ್ಯುತ್ ಕಂಬಗಳನ್ನು ದುರಸ್ತಿ ಮಾಡುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಭಾರತೀಯ ಕಿಸಾನ್ ಸಂಘದ ನಗರ ಘಟಕ ಅಧ್ಯಕ್ಷ ಭೀಮರಾಯ ಮಲಘಾಣ, ಪ್ರಧಾನ ಕಾರ್ಯದರ್ಶಿ ಭೀಮರಾಯ ಕುಡ್ಡಳ್ಳಿ, ರೈತರಾದ ಕಾಳಪ್ಪ ರಾಜಾಪೂರ, ನಾಗಣ್ಣ ಕಡಬೂರ, ಗುಡುಸಾಬ್ ಹರಸೂರ, ರಾಜು ಸಲಗೂರ, ಸೂರ್ಯಕಾಂತ ಕಟ್ಟಿ ಮನಿ, ಬಂಡಪ್ಪ ಬೊಮ್ಮಣ್ಣಿ, ಕೃಷ್ಣ ಸಿಂಗ ಶೆಟ್ಟಿ, ದೇವೀಂದ್ರ ಪೂಜಾರಿ, ನರಸಿಂಗ್ ಜಾಧವ್, ಕಾಶಿನಾಥ ರಾಜಾಪೂರ, ವಿಶಾಲ್ ಕಲಶೆಟ್ಟಿ ಸೇರಿದಂತೆ ಅನೇಕ ರೈತರಿದ್ದರು.

# ...ಮೊದಲನೇ ಪುಟದಿಂದ

## ಆಟೋ ಚಾಲಕರಿಗೆ 6ನೇ ಗ್ಯಾರಂಟಿ ಕೊಡಿ : ಹೆಚ್.ಡಿ. ಕುಮಾರಸ್ವಾಮಿ ಆಗ್ರಹ

ವಿಧಿಸಿದೆ. ಹೀಗಾಗಿ ಆ ತೆರಿಗೆಯನ್ನು ವಾಪಸ್ ಪಡೆಯಬೇಕು ಹಾಗೂ ಈಗಾಗಲೇ ಐದು ಗ್ಯಾರಂಟಿಗಳನ್ನು ಕೊಟ್ಟ ಹಾಗೆ ಆಟೋ ಚಾಲಕರಿಗೆ 6ನೇ ಗ್ಯಾರಂಟಿಯನ್ನು ಕೊಡಲಿ ಎಂದು ಆಗ್ರಹಿಸಿದರು. ಜಗತ್ತಿನಲ್ಲಿ ಯುದ್ಧ ಸನ್ನಿವೇಶ ಸೃಷ್ಟಿಯಾಗಿ ಸಂಕಷ್ಟ ಪರಿಸ್ಥಿತಿ ಉಂಟಾಗಿದೆ. ಇಂತಹ ಕ್ಲಿಷ್ಟ ಪರಿಸ್ಥಿತಿಯನ್ನು ಸಮರ್ಥವಾಗಿ ಕೇಂದ್ರ ಸರ್ಕಾರವು ನಿಭಾಯಿಸುತ್ತಿದೆ. ಆದರೆ ಬಿಕ್ಕಟ್ಟು ಪರಿಸ್ಥಿತಿಯಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಸಿದ್ದರಾಮಯ್ಯನವರು ವಿಫಲ ಪ್ರಯತ್ನ ಮಾಡುತ್ತಿದ್ದಾರೆ ಎಂದು ಸಚಿವರು ಟೀಕಿಸಿದರುಈ ಪರಿಸ್ಥಿತಿ ಸರಿ ಹೋಗುವವರೆಗೆ ಮಾಸಿಕ 15,000 ಗ್ಯಾರಂಟಿ ಕೊಡಿ ಎಂದು ಆಟೋ ಚಾಲಕರು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದಾರೆ. ಈಗಾಗಲೇ ಅನೇಕ ಭಾಗ್ಯಗಳನ್ನು ನೀಡಿರುವ ಆಟೋ ಚಾಲಕರಿಗೆ ಮತ್ತೊಂದು ಗ್ಯಾರಂಟಿಯನ್ನು ಕೊಡಲಿ. 6ನೇ ಗ್ಯಾರಂಟಿಯನ್ನು ಕೊಟ್ಟು ಗೌರವಿತವಾಗಿ ಸರ್ಕಾರ ನಡೆದುಕೊಳ್ಳಬೇಕು ಎನ್ನುವುದು ನನ್ನ ಒತ್ತಾಯವಾಗಿದೆ ಎಂದು ಕುಮಾರಸ್ವಾಮಿಯವರು ಹೇಳಿದರು. ಈಗ ಉಂಟಾಗಿರುವ ತೈಲ ಬಿಕ್ಕಟ್ಟು ನಾವು ತಂದುಕೊಂಡಿರುವ ಸಮಸ್ಯೆಯಲ್ಲ. ಕೊಲ್ಲಿ ಭಾಗದಲ್ಲಿ ಉಂಟಾಗಿರುವ ಯುದ್ಧವೇ ಇದಕ್ಕೆ ಕಾರಣ. ಭಾರತ ಈ ಸಮಸ್ಯೆಯನ್ನು ಬಯಸಿ ತಂದುಕೊಳ್ಳಲಿಲ್ಲ ಎಂಬುದನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕು. ಆದಾಗ್ಯೂ ಜನಸಾಮಾನ್ಯರ ಜೀವನಕ್ಕೆ ತೊಂದರೆಯಾಗದಂತೆ ಪರಿಸ್ಥಿತಿ ನಿರ್ವಹಿಸುವ ಕೆಲಸವನ್ನು ನರೇಂದ್ರ ಮೋದಿ ಅವರ ಸರ್ಕಾರ ಮಾಡುತ್ತಿದೆ. ಕಷ್ಟದ ಪರಿಸ್ಥಿತಿಯಲ್ಲೂ ಕೂಡ ಭಾರತಕ್ಕೆ ತೈಲ ಹಡಗುಗಳು ನಿರಾಯಾಸವಾಗಿ ಬರುತ್ತಿವೆ. ಮೋದಿ ಅವರ ಸರ್ಕಾರ ಕೈಗೊಂಡ ಕ್ರಮಗಳೇ ಉತ್ತಮ ಪರಿಸ್ಥಿತಿಗೆ ಕಾರಣ ಎಂದು ಕೇಂದ್ರ ಸಚಿವರು ತಿಳಿಸಿದರು. ಇಂಥ ಸಂಧಿಗ್ಧ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದರೆ ಏನು ಮಾಡುತ್ತಿತ್ತು? ಅವರೇನು ಎಲ್ಲವನ್ನು ಸಮರ್ಥವಾಗಿ ನಿರ್ವಹಣೆ ಮಾಡುತ್ತಿದ್ದರಾ? ಅನಗತ್ಯವಾಗಿ ಟೀಕೆ ಮಾಡುವುದು ಸರಿಯಲ್ಲ. ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಹಿಂದಿನ ಎಷ್ಟೋ ಪರಿಸ್ಥಿತಿಗಳಿಗೆ ಹೋಲಿಕೆ ಮಾಡಿದರೆ ಭಾರತದಲ್ಲಿ ಅಗತ್ಯ ವಸ್ತುಗಳ ಪೂರೈಕೆ ಸರಪಳಿಯಲ್ಲಿ ಅಂತಹ ದೊಡ್ಡ ಮಟ್ಟದ ವ್ಯತ್ಯಾಸ ಆಗಿಲ್ಲ. ಸುಖಾಸುಮ್ಮನೆ ಸರ್ಕಾರವನ್ನು ರಾಜಕೀಯವಾಗಿ ಟೀಕಿಸುವುದು ತಪ್ಪಾಗುತ್ತದೆ ಎಂದು ಕೇಂದ್ರ ಸಚಿವರು ಕಿವಿಮಾತು ಹೇಳಿದರು. ಈ ಸಂದರ್ಭದಲ್ಲಿ ಕೊಪ್ಪಳ ಜಿಲ್ಲೆಯ ಜೆಡಿಎಸ್ ಪಕ್ಷದ ಹಿರಿಯ ಮುಖಂಡ ಚಂದ್ರಶೇಖರ್ ಸೇರಿದಂತೆ ಅನೇಕ ಮುಖಂಡರು ಹಾಗೂ ಎನ್ಡಿಎ ನಾಯಕರು ಸಚಿವರ ಜೊತೆಯಲ್ಲಿ ಇದ್ದರು.

## ಕಾಂಗ್ರೆಸ್ ಅಭ್ಯರ್ಥಿ ಪರ ಆರ್‌ಡಿಎ ಅಧ್ಯಕ್ಷ ರಾಮಸ್ವಾಮಿ ಭರ್ಜರಿ ಪ್ರಚಾರ

ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸುವಂತೆ ಮತದಾರರಲ್ಲಿ ಮನವಿ ಮಾಡಿದರು. ನೂರಾರು ಜನರೊಂದಿಗೆ ವಾರ್ಡಿನಲ್ಲಿ ಪಾದಯಾತ್ರೆ ಕೈಗೊಂಡ ರಾಜಶೇಖರ್ ರಾಮಸ್ವಾಮಿ ಅವರು ಜನಪರ ಆಡಳಿತಕ್ಕಾಗಿ ಕಾಂಗ್ರೆಸ್ ಬೆಂಬಲಿಸುವಂತೆ ಕೋರಿದರು. ರಾಜ್ಯ ಸರ್ಕಾರವು ಗ್ಯಾರೆಂಟಿ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿಸುವುದರ ಜೊತೆಗೆ ಅಭಿವೃದ್ದಿಗೆ ಒತ್ತು ನೀಡಿದೆ. ಮಾಜಿ ಶಾಸಕ ಮೇಟಿ ಅವರು ಕ್ಷೇತ್ರದ ಸಮಗ್ರ ಅಭಿವೃದ್ದಿಗೆ ಪಣ ತೊಟ್ಟಿದ್ದರು. ಅವರ ಕನಸು ನನಸಾಗಿಸಲು ಅವರ ಪುತ್ರ ಉಮೇಶ ಹುಲ್ಲಪ್ಪ ಮೇಟಿ ಅವರನ್ನು ಭಾರಿ ಬಹುಮತದಿಂದ ಗೆಲ್ಲಿಸುವಂತೆ ಮನವಿ ಮಾಡಿದರು. ಕಾಂಗ್ರೆಸ್ ಪಕ್ಷವು ಬಡವರ ಪರವಾದ ಪಕ್ಷ, ಸಾಮಾಜಿಕ ನ್ಯಾಯ ಕೊಡಿಸುವ ಪಕ್ಷ ಅಂದರೆ ಅದು ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ. ದಲಿತ, ಅಲ್ಪಸಂಖ್ಯಾತರ ವಿರೋಧಿ ಬಿಜೆಪಿ ಪಕ್ಷವನ್ನು ಸೋಲಿಸಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸುವಂತೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ವಿಟಿಡಿಎ ಅಧ್ಯಕ್ಷ ಪ್ರಕಾಶ ತಬಶೆಟ್ಟಿ, ಬಾಗಕೋಟೆ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಭು ರುದ್ರಾಕ್ಷಿ, ಪ್ರಚಾರ ಸಮಿತಿ ಪ್ರಧಾನ ಕಾರ್ಯದರ್ಶಿ ಶ್ರೀಧರ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ, ಪ್ರಚಾರ ಸಮಿತಿ ಕಾರ್ಯದರ್ಶಿ ಸುಧೀರ್ ಜಾಹಗೀರದಾರ, ಐಟಿ ಸೆಲ್ ಚೇರ್ಮನ್ ತನ್ವೀರ್ ಸೇರಿದಂತೆ ನೂರಾರು ಜನರು ಭಾಗವಹಿಸಿದ್ದರು.

## ರಾತ್ರಿಯಡಿ ಸಾಲುಗಟ್ಟಿ ನಿಂತ ಅಟೋಗಳು ಡಿಸಿ ಮಧ್ಯಸ್ಥಿಕೆವಹಿಸಲು ಅಟೋ ಚಾಲಕರ ಆಗ್ರಹ

ಕುಟುಂಬಗಳು ಉಪವಾಸ ಬೀಳುವ ಪರಸ್ಥಿತಿ ನಿರ್ಮಾಣವಾಗಿದೆ. ಬೆಲೆಯೂ ಹೆಚ್ಚಿಸಲಾಗಿದೆ. ಸಮಸ್ಯೆಗೆ ಕೂಡಲೇ ಪರಿಹಾರ ಒದಗಿಸಬೇಕೆಂದು ಆಗ್ರಹಿಸಿದರು. ಒಂದು ಅಟೋಕ್ಕೆ 500 ರೂ ಮಾತ್ರ ನೀಡಲಾಗುತ್ತಿದೆ. ಬೇಡಿಕೆ ಗ್ಯಾಸ್ ತೊರೆಯುತ್ತಿಲ್ಲ ಎಂಬುದು ಅಟೋ ಚಾಲಕರ ಆರೋಪ. ರಾತ್ರಿಯಿಂದಲೇ ಅಟೋಗಳು ಗ್ಯಾಸ್ ಬಂಕ್ ಮುಂದೆ ನಿಲುಗಡೆಯಾಗಿ ಹಳೆ ಡಿಸಿ ಕಚೇರವರಗೆ ಸಾಲುಗಟ್ಟಿ ನಿಲ್ಲುವಂತಾಯಿತು. ಅಡುಗೆ ಅನಿಲ್ ಸಮಸ್ಯೆ ನೀಗುವಷ್ಟರಲ್ಲಿಯೇ ಸಿಎನ್‌ಜಿ ಪಡೆಯಲು ಪರದಾಟ ಪ್ರಾರಂಭವಾಗಿದೆ.

## ಬಿಸಿಲಿನ ತಾಪಕ್ಕೆ ಮೂಕ ಪ್ರಾಣಿಗಳಿಗೆ ನೀರಿನ ತೊಟ್ಟಿಗಳ ವ್ಯವಸ್ಥೆ

ನೋವಿಗೆ ಸ್ಪಂದಿಸಿದ ಸಂಸ್ಥೆಯವರು, ಈ ಮಹತ್ವದ ಕಾರ್ಯವನ್ನು ಕೈಗೊಂಡಿದ್ದಾರೆ. ಬಿಸಿಲಿನ ತೀವ್ರತೆಯಿಂದ ಪ್ರಾಣಿಗಳು ಎದುರಿಸುತ್ತಿರುವ ಸಂಕಷ್ಟವನ್ನು ಕಡಿಮೆ ಮಾಡುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಸಂಸ್ಥೆಯ ಪದಾಧಿಕಾರಿಗಳು, ''ಸುಡುವ ಬಿಸಿಲಲ್ಲಿ ನೀರಿಗಾಗಿ ಅಲೆದಾಡುವ ಮೂಕ ಪ್ರಾಣಿಗಳ ಜೀವ ಉಳಿಸುವುದು ನಮ್ಮೆಲ್ಲರ ಜವಾಬ್ದಾರಿ. ಈ ಕಾರ್ಯದಲ್ಲಿ ಸಾರ್ವಜನಿಕರೂ ಕೈಜೋಡಿಸಬೇಕು'' ಎಂದು ಮನವಿ ಮಾಡಿದರು. ಈ ಕಾರ್ಯಕ್ರಮದಲ್ಲಿ ದಾರಿದೀಪ ಸಂಸ್ಥೆಯ ಅಧ್ಯಕ್ಷ ಮಂಜುನಾಥ್ ಸೇರಿದಂತೆ ಸಂಗರೆಡ್ಡಿ, ಅಶ್ವಿನಿ ಸಂತೋಷ ಕುಮಾರ್, ರಾಧಾ, ಬಿ. ರಾಘವೇಂದ್ರ, ಬಸವರಾಜ ಉಪಸ್ಥಿತರಿದ್ದರು.

## ಶ್ರೀ ರೇವಣ ಸಿದ್ದೇಶ್ವರ ದೇವಸ್ಥಾದ ಮಹಾದ್ವಾರ ನಿರ್ಮಾಣಕ್ಕೆ ಅನುದಾನ ನೀಡಲು ಮನವಿ

ನಗರದ ಮಡಿವಾಳ ನಗರದ ಶ್ರೀ ರೇವಣ ಸಿದ್ದೇಶ್ವರ ಸ್ವಾಮಿಯ ದೇವಸ್ಥಾನದ ಅಭಿವೃದ್ಧಿ ಹಾಗೂ ಜೀರ್ಣೋದ್ಧಾರಕ್ಕಾಗಿ 5 ಲಕ್ಷ ರೂ. ಅನುದಾನವನ್ನು ಬಿಡುಗಡೆ ಮಾಡಿದ್ದು, ಕಾಮಗಾರಿ ನಡೆಯುತ್ತಿದೆ. ಇದೀಗ ದೇವಸ್ಥಾನದ ನವೀಕರಣ, ಗೋಪುರ ನಿರ್ಮಾಣದ ಜೊತೆಗೆ, ದೇವಸ್ಥಾನದ ಮುಂಭಾಗದಲ್ಲಿ ಮಹಾದ್ವಾರ ನಿರ್ಮಾಣಕ್ಕೆ 5 ಲಕ್ಷ ರೂ ಅನುದಾನ ನೀಡಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಶ್ರೀ ರೇವಣ ಸಿದ್ದೇಶ್ವರ ದೇವಸ್ಥಾನ ಆಡಳಿತ ಮಂಡಳಿ, ಗಜಾನನ ನವ ಯುವಕ ಸಂಘ ಹಾಗೂ ಸಮಸ್ತ ಭಕ್ತರು ಭಾಗವಹಿಸಿದ್ದರು.

## ಕಾಯ್ದೆ ಜಾರಿ ವಿರೋಧಿಸಿ ಲಿಂಗತ್ವ ಅಲ್ಪಸಂಖ್ಯಾತರಿಂದ ಪ್ರತಿಭಟನಾ ರ್ಯಾಲಿ

ರಕ್ಷಣೆ ವಿರೋಧವಾಗಿದೆ. ಸುಪ್ರಿಂಕೋರ್ಟ ನೀಡರುವ ತೀರ್ಪಿನ ಉಲ್ಲಂಘನೆಯಾಗಿದ್ದು ಕೂಡಲೇ ತಿದ್ದುಪಡಿ ಕಾಯ್ದೆಯನ್ನು ಕೈ ಬಿಡಬೇಕೆಂದು ಒತ್ತಾಯಿಸಿದರು. 2017 ರಲ್ಲಿ ಕರ್ನಾಟಕರಾಜ್ಯ ಸರ್ಕಾರವು ಲಿಂಗತ್ವ ಅಲ್ಪಸಂಖ್ಯಾತರ ವ್ಯಕ್ತಿಗಳ ರಾಜ್ಯ ನೀತಿಯನ್ನು ರೂಪಿಸಿ ಲಿಂಗತ್ವ ಅಲ್ಪಸಂಖ್ಯಾತರ ವ್ಯಕ್ತಿಗಳ ವೈಯಕ್ತಿಕ ಮತ್ತು ಸಮೂಹವಾಗಿ ಸಂವಿಧಾನಿಕ ಭರವಸೆಗಳನ್ನು ಖಾತ್ರಿಪಡಿಸಿತ್ತು. ಆದರೆ ಪ್ರಸ್ತಾಪಿತ ತಿದ್ದುಪಡಿ ಕಾಯ್ದೆ ಲಿಂಗತ್ವ ಅಲ್ಪಸಂಖ್ಯಾತರ ಉಲ್ಲೇಖಿತ ತತ್ವಗಳಿಗೆ ವಿರುದ್ದವಾಗಿದೆ. ಟ್ರಾನ್ಸಜೆಂಟರ್ ಎಂಬ ಕಾನೂನು ವ್ಯಾಖ್ಯೆಯನ್ನು ಸೀಮಿತಗೊಳಿಸಿ ಹಿಂಸೆಗೆ ಒಳಗಾದ ವ್ಯಕ್ತಿಯನ್ನು ಗುರುತಿಸುವ ಹೆಸರಿನಲ್ಲಿ ಲಿಂಗತ್ವ ಅಲ್ಪಸಂಖ್ಯಾತರನ್ನು ವಿಭಜಿಸಿ ಅಂತರಲಿಂಗ ಲಕ್ಷಣಗಳಿರುವವರೆಗೆ ಮಾತ್ರ ಸೀಮಿತಗೊಳಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಕಾಯ್ದೆಯಂತೆ ವೈಧ್ಯಕೀಯ ಅಧಿಕಾರ ವ್ಯವಸ್ಥೆ ದೇಹಗಳ ಮೇಲೆ ಗುರುತು, ವೈಧ್ಯಕೀಯ ಮಾಹಿತಿಯನ್ನು ಜಿಲ್ಲಾಧಿಕಾರಿಗಳಿಗೆ ಬಹಿರಂಗ ಪಡಿಸುವ ಅಧಿಕಾರ ನೀಡಲಾಗುತ್ತದೆ. ಅವೈಜ್ಞಾನಿಕವಾಗಿ ಲಿಂಗತ್ವ ನಿರ್ಧರಿಸುವ ಕ್ರಮ ವಿರೋಧಿಯಾಗಿದೆ.ಕೂಡಲೇ ಭಾರತ ಸರ್ಕಾರ ರೂಪಿಸಿರುವ 2026 ಮಸೂದೆಯನ್ನು ಹಿಂಪಡೆಯಬೇಕೆಂದು ಆಗ್ರಹಿಸಿದ ಮನವಿಯನ್ನು ಸಲ್ಲಿಸಲಾಯಿತು. ಈ ಸಮದರ್ಬದಲ್ಲಿ ಲಿಂಗತ್ವ ಮತ್ತು ಲೈಂಗಿಕ ಬಹುತ್ವಕ್ಕಾಗಿ ಚಳುವಳಿ, ದ ಕೋಲಿಷನ್ ಫಾರ್ ಸೆಕ್ಸ್ ವರ್ಕಸ್, ಸೆಕ್ಸುವಲ್ ಆಂಡ್ ಜೆಂಡರ್ ಮೈನಾರೀಟಿಸ್ ರೈಟ್ಸ್ ಸಂಘಟನೆಗಳ ಪದಾಧಿಕಾರಿಗಳು ಭಾಗಿಯಾಗಿದ್ದರು. ಪ್ರಗತಿದಾಸ್, ಅಕ್ಷರ, ಅಭಿಷೇಕ್ ಸೇರಿದಂತೆ ಅನೇಕರು ಭಾಗಿಯಾದರು.

## ಒಪೆಕ್ ಆಸ್ಪತ್ರೆ ಎದುರುಗಡೆ ಟೀನ್ ಶೆಡ್‌ಗಳ ತೆರವು

ಆದರೆ ಅಕಸ್ಮಿಕ ಅಪಾಯ ಎದುರಾದಲ್ಲಿ ಜೀವನಕ್ಕೆ ಕುತ್ತು ತರುವ ಅಪಾಯವನ್ನು ಮನವರಿಕೆ ಮಾಡಿರುವ ಹಿನ್ನಲೆಯಲ್ಲಿ ತೆರವು ಕಾರ್ಯ ಮುಂದುವರೆಸಲಾಗಿದೆ. ಕಳೆದ ಎರಡು ದಿನಗಳಿಂದತೆರವು ಕಾರ್ಯಚರಣೆ ಮುನ್ನಡೆದಿದು ಮುಕ್ತಾಯ ಹಂತಕ್ಕೆ ಬಂದಿದೆ. ಟೀನ್ ಶೆಟ್‌ಗಳ ವ್ಯಾಪಾರಸ್ಥರು ಪರ್ಯಾಯ ಸ್ಥಳದಲ್ಲಿ ವ್ಯಾಪಾರಕ್ಕೆ ಅವಕಾಶ ನಿಡಬೇಕೆನ್ನುವ ಬೇಡಿಕೆಯನ್ನು ಪಾಲಿಕೆಗೆ ಸಲ್ಲಿಸಿದ್ದಾರೆ.

## ಆಂಧ್ರ ಜನತೆಗೆ ಕರ್ನಾಟಕ ತಾಯಿ ಇದ್ದಂತೆ-ನಾರಾ ಲೋಕೇಶ


ಮೂಲಕ ತಾಯಿ ಮಮತೆಯನ್ನು ನೀಡಿದೆ. ಕನ್ನಡ ಮತ್ತು ಕರ್ನಾಟಕದ ಋಣವನ್ನು ನಮ್ಮ ಜನತೆಗೆ ಮರೆಯಬಾರದು ಎಂದು ಕರೆ ನೀಡಿದರು. ನಮ್ಮ ತಂದೆ, ಆಂಧ್ರಪ್ರದೇಶದ ಮುಖ್ಯಮಂತ್ರಿ ನಾರಾ ಚಂದ್ರಬಾಬು ನಾಯ್ಡು ಅವರನ್ನು ಜೈಲಿಗೆ ಹೋದಾಗ ಸಿಂಧನೂರು ಸೇರಿ ಕರ್ನಾಟಕದ ಜನತೆ ಅಪಾರ ಬೆಂಬಲ ಸೂಚಿಸಿದ್ದು, ಇದನ್ನು ನಾನು ಮರೆಯುವುದಿಲ್ಲ. ನಾನು ಕರ್ನಾಟಕದಲ್ಲಿ ನೆಲೆಸಿರುವ ಆಂಧ್ರಪ್ರದೇಶದ ಜನತೆಗೆ ಸದಾ ಋಣಿಯಾಗಿರುತ್ತೇನೆ ಎಂದರು. ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ, ಕೇಂದ್ರ ಸರಕಾರದ ಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ರಕ್ಷಣಾ ಇಲಾಖೆ ರಾಜ್ಯ ಖಾತೆ ಸಚಿವ ಸಂಜಯ್ ಶೇಠ್, ಕರ್ನಾಟಕ ಸರಕಾರದ ಸಚಿವ ಎನ್.ಎಸ್.ಬೋಸರಾಜ್, ವಿಶಾಕ್ ಪಟ್ನಂ ಲೋಕಸಭಾ ಸದಸ್ಯ ಮೋತುಕುಮಿಲ್ಲಿ ಭರತ್, ವಿಧಾನಪರಿಷತ್ ಶಾಸಕ ಬಸನಗೌಡ ಬಾದರ್ಲಿ, ಮಾಜಿ ಶಾಸಕರಾದ ವೆಂಕಟರಾವ್ ನಾಡಗೌಡ, ರಾಜಾ ವೆಂಕಟಪ್ಪ ನಾಯಕ ಸೇರಿದಂತೆ ಕಮ್ಮಾ ಸಮಾಜದ ಮುಖಂಡರು ಇದ್ದರು.

## ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲವು-ಕುಮಾರಸ್ವಾಮಿ ವಿಶ್ವಾಸ

ಜೆಡಿಎಸ್ ಪಕ್ಷಗಳ ಮೈತ್ರಿಯೊಂದಿಗೆ ಎರಡು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ. ಕಾಂಗ್ರೆಸ್ ಪಕ್ಷದ ದುರಾಡಳಿತಕ್ಕೆ ರಾಜ್ಯದ ಜನತೆ ಬೇಸತ್ತು ಹೋಗಿದ್ದು, ಈಗ ನಡೆಯುತ್ತಿರುವ ಬೈ ಎಲೆಕ್ಷನ್‌ನಲ್ಲಿ ಕಾಂಗ್ರೆಸ್‌ನ ತೆಗೆದು ಹಾಕಬೇಕು ಎನ್ನುವ ಭಾವನೆ ಜನರಲ್ಲಿದೆ. ಈ ನಿಟ್ಟಿನಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯ ಸಾಧಿಸಲಿದ್ದಾರೆ ಎಂದು ಹೇಳಿದರು. ಉಪಚುನಾವಣೆ ಹಿನ್ನಲೆಯಲ್ಲಿ ಇಂದು ಪ್ರಚಾರಕ್ಕೆ ತೆರಳುತ್ತಿದ್ದಾನೆ. ದಾವಣಗೆರೆ ಕ್ಷೇತ್ರದಲ್ಲಿ ಎರಡು ಕಡೆ ಸಭೆಗಳಲ್ಲಿ ಭಾಗವಹಿಸುತ್ತೇನೆ ಭಾನುವಾರ ಬಾಗಲಕೋಟ ಕ್ಷೇತ್ರದಲ್ಲಿ ಪ್ರಚಾರ ನಡೆಸುತ್ತೇನೆ. ಎರಡು ಪಕ್ಷಗಳು ಗೆಲುವು ಸಾಧಿಸಲು ಹೋರಾಟ ಮಾಡುತ್ತಿದ್ದು, ಬಿಜೆಪಿ ಅಭ್ಯರ್ಥಿಗಳು ಎರಡು ಕಡೆ ಜಯ ಸಾಧಿಸುವ ವಿಶ್ವಾಸವಿದೆ ಎಂದರು.

# ರಸ್ತೆ ಅತಿಕ್ರಮಿಸಿ, ಅಕ್ರಮ ಟಿನ್‌ಶೆಡ್ ನಿರ್ಮಾಣ: ತೆರವಿಗೆ ಕೆಪಿಆರ್‌ಎಸ್ ಮನವಿ

■ ಕನ್ನಡ ಮಾತೃ ಭೂಮಿ ವಾರ್ತೆ



**ರಾಯಚೂರು,ಏ.31**-ತಾಲೂಕಿನ ಬಾಪೂರು ಗ್ರಾಮದಲ್ಲಿ ಸಾರ್ವಜನಿಕ ರಸ್ತೆಯನ್ನು ಒತ್ತುವರಿ ಮಾಡಿಕೊಂಡು ಅನಧೀಕೃತವಾಗಿ ಟಿನ್‌ಶೆಡ್ ಹಾಕಲಾಗಿದ್ದು, ಕೂಡಲೇ ಒತ್ತುವರಿಯನ್ನು ತೆರವುಗೊಳಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದಿಂದ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ನಗರದ ಜಿಲ್ಲಾಡಳಿತ ಭವನದಲ್ಲಿ ಮನವಿ ಸಲ್ಲಿಸಿದ ಸಂಘದ ಪ್ರಮುಖರು, ರಾಯಚೂರು ತಾಲೂಕಿನ ಸಿಂಗನೋಡಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಬಾಪೂರು ಗ್ರಾಮದ ಸರ್ವೆ ನಂ.3ರಲ್ಲಿ 70ಕ್ಕೂ ಹೆಚ್ಚು ಕುಟುಂಬಗಳು ವಾಸಿಸುತ್ತಿದ್ದು ಮತ್ತು ಈ ಪ್ರದೇಶದಲ್ಲಿ ಪುರಾತನ ಕಾಲದ ಆಂಜಿನೇಯ ದೇವಸ್ಥಾನವಿದ್ದು, ಪೋಲಮ್ಮ ದೇವಿ ದೇವಸ್ಥಾನ. ದಸ್ತಗಿರಿಸಾಬ್ ದರ್ಗಾ ಮತ್ತು ಈಶ್ವರ ದೇವಸ್ಥಾನ ಬರುತ್ತದೆ. ಈ ಪ್ರದೇಶವು ಒಟ್ಟು 5 ಎಕರೆ 38 ಗುಂಟೆ ಜಮೀನಿದ್ದು, ಗೋಪಾಲ ಗೊಲ್ಲರು, ನಾಗರಾಜ ಗೊಲ್ಲರು ಮತ್ತು ಕೃಷ್ಣ ಗೊಲ್ಲರು ಎಂಬ ವ್ಯಕ್ತಿಗಳು ಸೇರಿ ಅಕ್ರಮವಾಗಿ ನಡು ರಸ್ತೆಯಲ್ಲಿ ಟಿನ್‌ಶಡ್ ನಿರ್ಮಾಣ ಮಾಡಿದ್ದಾರೆ ಎಂದು ದೂರಿದರು.

ಈ ಪ್ರದೇಶದ 70 ಕುಟುಂಬದ ಸಾರ್ವಜನಿಕರು ಓಡಾಟ ಮಾಡಲು ರಸ್ತೆಗಳಿಲ್ಲದೇ ಗಂಭೀರ ಸಮಸ್ಯೆ ಎದುರಿಗಸುತ್ತಿದ್ದಾರೆ. ಅದನ್ನು ತೆರವುಗೊಳಿಸಲು ಸಾರ್ವಜನಿಕರಿಗೆ ರಸ್ತೆ ಕಲ್ಪಿಸಲು ಫೆ.6ರಿಂದ ನಿರಂತರವಾಗಿ ಗ್ರಾಮ ಪಂಚಾಯತಿಗೆ, ತಾಲೂಕ ಪಂಚಾಯತಿಗೆ, ಜಿಲ್ಲಾ ಪಂಚಾಯತಿಗೆ ಹಲವಾರು ಬಾರಿ ಅರ್ಜಿಗಳನ್ನು ನೀಡಿದರೂ ಇದುವರೆಗೂ ಯಾವುದೇ ಕ್ರಮ ವಹಿಸಿರುವುದಿಲ್ಲ ಎಂದರು.

ಈ ವಿಚಾರವಾಗಿ ಗ್ರಾಮದಲ್ಲಿ ಪ್ರತಿನಿತ್ಯ ಜಗಳ ನಡೆದು ಯರಗೇರಾ ಪೊಲೀಸ್ ಠಾಣೆಯಲ್ಲಿ ಹಲವಾರು ದೂರುಗಳು ದಾಖಲಾಗಿರುತ್ತವೆ. ಡಿ.11 ಮೂರು ಜನರ ಮೇಲೆ ಜಾತಿ ನಿಂದನೆ ಪ್ರಕರಣ ದಾಖಲಾಗಿದೆ. ಸಂಬಂಧಿಸಿದ ಯರಗೇರಾ ಪೊಲೀಸ್ ಠಾಣೆಯ ಪೊಲೀಸರು ಊರಿನ ಸಾರ್ವಜನಿಕರನ್ನು ಹಾಗೂ ಅವರನ್ನು ಕರೆಯಿಸಿ ರಸ್ತೆ ತೆರವು ಸಂಬಂಧಿಸಿದಂತೆ ಚರ್ಚೆ ನಡೆಸಿದ್ದಾರೆ. ಮೂರು ಜನರು ಮುಚ್ಚಳಿಕೆ ಪತ್ರ ಬರೆದುಕೊಟ್ಟು, ನಾವು ಮಾಡಿದ್ದು ತಪ್ಪಾಗಿದೆ ರಸ್ತೆಯನ್ನು ತೆರವುಗೊಳಿಸುವುದಾಗಿ ಪೊಲೀಸ್ ಠಾಣೆಯಲ್ಲಿ ತಪ್ಪೊಪ್ಪಿಗೆ ಪತ್ರ ಬರೆದುಕೊಟ್ಟಿದ್ದಾರೆ. ಆದರೂ ಇದುವರೆಗೂ ಕಾನೂನು ಬಾಹೀರವಾಗಿ ಅತಿಕ್ರಮಿಸಿದ ರಸ್ತೆಯನ್ನು ತೆರವುಗೊಳಿಸಿರುವುದಿಲ್ಲ ಎಂದರು.

ಕೂಡಲೇ ಅನಧಿಕೃವಾಗಿ ನಿರ್ಮಾಣ ಮಾಡಿರುವ ಟಿನ್‌ಶಡ್‌ನ್ನು ತೆರವುಗೊಳಿಸಲು ಕೂಡಲೇ ಮಧ್ಯಪ್ರವೇಶ ಮಾಡಿ ಬಾಪೂರು ಪ್ರದೇಶದ 70 ಕುಟುಂಬಗಳ ಸಾರ್ವಜನಿಕರಿಗೆ ಓಡಾಡಲು ರಸೆಗಳು ಕಲಿಸಿಕೊಡಬೇಕು ಒಂದು ವೇಳೆ ತಾವುಗಳು ವಿಳಂಬ ನೀತಿಯನ್ನು ಅನುಸರಿಸಿದ್ದಲ್ಲಿ ಸಂಘಟನೆಗಳು ಸೇರಿದಂತೆ ಬಾಪೂರು ಗ್ರಾಮದ ಸಾರ್ವಜನಿಕರೊಂದಿಗೆ ನ್ಯಾಯ ಸಿಗುವವರೆಗೂ ತಮ್ಮ ಕಛೇರಿಯ ಮುಂದೆ ಅನಿರ್ದಿಷ್ಟಾವಧಿ ಪ್ರತಿಭಟನಾ ಧರಣಿ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ಪ್ರಮುಖರಾದ ಸತ್ಯಪ್ಪ, ತಿಮ್ಮಪ್ಪ, ಕೆ.ಜಿ.ವೀರೇಶ, ಕರಿಯಪ್ಪ, ಹನುಮಂತು, ಸಾಗನುರು ವೀರೇಶ, ಊರಭಾವಿ ಈರಪ್ಪ, ಗೌಳೋಳ ನರಸಪ್ಪ, ಉರುಕುಂದಪ್ಪ, ಮುದ್ದಪ್ಪ, ದೊಡ್ಡ ಕರಿಯಪ್ಪ ಸೇರಿದಂತೆ ಅನೇಕರಿದ್ದರು.

# ಸಂಗೀತ ಹಾಲಿಸುವುದರಿಂದ ಮನಸಿಗೆ ಶಾಂತಿ ನೆಮ್ಮದಿ ದೊರೆಯುತ್ತದೆ-ವಿರುಪಾಕ್ಷಪ್ಪ ಪತ್ತೇಪುರ

■ ಕನ್ನಡ ಮಾತೃ ಭೂಮಿ ವಾರ್ತೆ




**ರಾಯಚೂರು,ಏ.4**- ಗುರುಪುಟ್ಟ ಕಲಾ ಬಳಗ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ 2025-2026ನೇಯ ಸಾಲಿನ ವಿಶೇಷ ಘಟಕ ಯೋಜನೆಯಡಿ ಕೇಸರಿ ನಂದನ ಸಾಂಸ್ಕೃತಿಕ-ಸಂಭ್ರಮ ಕಾರ್ಯಕ್ರಮವನ್ನು ನಗರದ ಶ್ರೀ ವೀರಾಂಜನೇಯ ದೇವಸ್ಥಾನ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ವಿರುಪಾಕ್ಷಪ್ಪ ಪತ್ತೇಪುರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು, ಸಂಗೀತವು ಇದು ವ್ಯಕ್ತಿಯ ಜೀವನದಲ್ಲಿ ಸಂತೋಷಪಡಿಸಿ ಮತ್ತು ಸಂತೋಷವನ್ನು ಹರಡುತ್ತದೆ. ಸಂಗೀತವು ಜೀವನದ ಆತ್ಮವಾಗಿದೆ ಮತ್ತು ನಮಗೆ ಅಪಾರ ಶಾಂತಿಯನ್ನು ನೀಡುತ್ತದೆ ಎಂದರು.

ಸಂಗೀತವು ಸರಿಗಮಾಪ ರಾಗಗಳು, ತಾಳಗಳು ಇತ್ಯಾದಿಗಳನ್ನು ಒಳಗೊಂಡಿದೆ. ಸಂಗೀತವು ಶೈಕ್ಷಣಿಕ ಕಾರ್ಯಕ್ಷಮತೆ, ಆರೋಗ್ಯ, ಯೋಗಕ್ಷೇಮ, ಏಕಾಗ್ರತೆ ಮತ್ತು ಮೆಮೊರಿ ಮಟ್ಟವನ್ನು ಸುಧಾರಿಸಲು ಸಹಾಯ ಮಾಡುತ್ತದೆ ಎಂದು ಹಲವಾರು ಅಧ್ಯಯನಗಳು ತೋರಿಸುತ್ತವೆ ಎಂದು ತಿಳಿಸಿದರು.ಶ್ರೀ ಪಾಂಡು ಮಾತನಾಡಿ, ಬಾಲ್ಯದ ವರ್ಷಗಳಲ್ಲಿ ಸಂಗೀತವನ್ನು ಪರಿಚಯಿಸುವುದು ಕಲಿಕೆ ಮತ್ತು ಕುತೂಹಲದ ಕಡೆಗೆ ಸಕಾರಾತ್ಮಕ ಮನೋಭಾವವನ್ನು ಬೆಳೆಸಲು ಸಹಾಯ ಮಾಡುತ್ತದೆ, ಕಲಾತ್ಮಕ ಶಿಕ್ಷಣವು ಮೆದುಳು ಮತ್ತು ಮಗುವಿನ ಕಲ್ಪನೆ ಎರಡನ್ನೂ ಅಭಿವೃದ್ಧಿಪಡಿಸುತ್ತದೆ ಎಂದರು.

ಮನೋಜ್ ಮಾತನಾಡಿ ಇತ್ತೀಚಿನ ದಿನಗಳಲ್ಲಿ ಒತ್ತಡ, ಆತಂಕದಂತಹ ಮಾನಸಿಕ ಸಮಸ್ಯೆಗಳು ಜನರಲ್ಲಿ ಹೆಚ್ಚುತ್ತಿದೆ. ಆದರೆ ಸಂಗೀತಕ್ಕೆ ಕಿವಿಯಾಗುವ ಮೂಲಕ ಇವುಗಳನ್ನು ದೂರ ಮಾಡಬಹುದು. ಸಂಗೀತಕ್ಕೆ ಮಾನಸಿಕ ಆರೋಗ್ಯ ವೃದ್ದಿಸುವ ಗುಣವಿದೆ. ಇದು ಮನಸ್ಸಿನ ಭಾವನೆಗಳನ್ನು ಹೊರ ಹಾಕಲು ಸಹಕಾರಿ ಎಂದರು.

ಈ ಸಂದರ್ಭದಲ್ಲಿ ಕಲ್ಯಾಣ್, ನರೇಶ್, ವಿಜಯ್. ಶ್ರೀನಿವಾಸ್ ಸೇರಿದಂತೆ ಅನೇಕರು ಇದ್ದರು.

# ಇರಾನ್ ತೈಲ ಖರೀದಿಯಲ್ಲಿ ಪಾವತಿ ಸಮಸ್ಯೆಯಾಗಿಲ್ಲ, ಇಂಧನ ತುಂಬಿದ ಹಡಗು ಚೀನಾಕ್ಕೆ ಹೋಗಿಲ್ಲ: ಕೇಂದ್ರ ಸರ್ಕಾರ



**ನವದೆಹಲಿ,ಏ.4**-ಪಾವತಿ ಸಮಸ್ಯೆಗಳಿಂದಾಗಿ ಇರಾನಿನ ಕಚ್ಚಾ ತೈಲ ತುಂಬಿದ್ದ ಹಡಗನ್ನು ಗುಜರಾತ್‌ನ ವಾಡಿನಾರ್‌ನಿಂದ ಚೀನಾಕ್ಕೆ ತಿರುಗಿಸಲಾಗಿದೆ ಎಂಬ ವರದಿ ಮತ್ತು ಸಾಮಾಜಿಕ ಮಾಧ್ಯಮ ಹರದಾಡುತ್ತಿರುವ ವದಂತಿಯನ್ನು ಕೇಂದ್ರ ಸರ್ಕಾರ ನಿರಾಕರಿಸಿದೆ. ಇದು ವಾಸ್ತವಿಕವಾಗಿ ತಪ್ಪು ಮತ್ತು ದಾರಿತಪ್ಪಿಸುವ ಮಾಹಿತಿ ಎಂದಿದೆ.

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ತನ್ನ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಳ್ಳುವ ಮೂಲಕ ಸ್ಪಷ್ಟನೆ ನೀಡಿದೆ. ಭಾರತವು 40 ಕ್ಕೂ ಹೆಚ್ಚು ದೇಶಗಳಿಂದ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತದೆ. ತೈಲ ಕಂಪನಿಗಳು ವಾಣಿಜ್ಯ ಅಗತ್ಯಗಳ ಆಧಾರದ ಮೇಲೆ ಪೂರೈಕೆದಾರರನ್ನು ಆಯ್ಕೆ ಮಾಡಲು ಸಂಪೂರ್ಣ ಅಧಿಕಾರವನ್ನು ಹೊಂದಿವೆ. ಪಾವತಿ ಸಮಸ್ಯೆಗಳಿಂದಾಗಿ ಇರಾನಿನ ಕಚ್ಚಾ ತೈಲ ಭಾರತದಿಂದ ಚೀನಾಕ್ಕೆ ತಿರುಗಿಸಲ್ಪಟ್ಟಿದೆ ಎಂಬ ಮಾಹಿತಿಯು ಸುಳ್ಳಾಗಿದೆ ಎಂದಿದೆ. ಕಚ್ಚಾ ತೈಲ ಆಮದಿಗೆ ಇರಾನ್ ಜೊತೆ ಯಾವುದೇ ಪಾವತಿ ಸಮಸ್ಯೆ ಉಂಟಾಗಿಲ್ಲ. ನಮ್ಮ ಸಂಸ್ಕರಣಾಗಾರಗಳು ಜಾಗತಿಕ ಪೂರೈಕೆದಾರರಿಂದ ವ್ಯಾಪಕ ಪ್ರಮಾಣದಲ್ಲಿ ತೈಲವನ್ನು ನಿರಂತರ ಪಡೆಯುತ್ತಿವೆ ಎಂದು ಹೇಳಿದೆ.

ಮಧ್ಯಪ್ರಾಚ್ಯ ಸಂಘರ್ಷದಿಂದಾಗಿ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದರ ನಡುವೆ, ನಮ್ಮಲ್ಲಿನ ಸಂಸ್ಕರಣಾಗಾರಗಳು ಇರಾನ್ ಸೇರಿದಂತೆ ಹಲವು ದೇಶಗಳಿಂದ ಕಚ್ಚಾ ತೈಲ ಯಾವುದೇ ಅಡಚಣೆಯಿಲ್ಲದೇ ಪಡೆದುಕೊಳ್ಳುತ್ತಿವೆ. ಇರಾನಿನ ಕಚ್ಚಾ ತೈಲ ಆಮದಿಗೆ ಪಾವತಿ ಸಮಸ್ಯೆ ಎದುರಾಗಿದೆ ಎಂಬುದು ಕೇವಲ ವದಂತಿ. ಆಫ್ರಾಮ್ಯಾಕ್ಸ್ ಟ್ಯಾಂಕರ್ ಪಿಂಗ್ ಶುನ್ ಎಂಬ ಹಡಗು ಈ ವಾರದಲ್ಲಿ ಗುಜರಾತ್‌ನ ವಾಡಿನಾರ್ ಬಂದರಿಗೆ ಬರಲಿದೆ ಎಂದಿದೆ.

ಇರಾನ್ ತೈಲದ ಮೇಲೆ ಅಮೆರಿಕ ನಿರ್ಬಂಧ ವಿಧಿಸಿದ ಬಳಿಕ ಅಂದರೆ, 2019 ರಿಂದ ಭಾರತ ಖರೀದಿಸುತ್ತಿರುವ ಮೊದಲ ಇರಾನಿ ಕಚ್ಚಾ ತೈಲ ಇದಾಗಲಿದೆ. ತೈಲ ಬಿಕ್ಕಟ್ಟು ಹಿನ್ನೆಲೆ ಯುದ್ಧಪೀಡಿತ ಇರಾನ್‌ನಿಂದ ಭಾರತ ತೈಲ ಸರಕುಗಳನ್ನು ಖರೀದಿಸಲು ಮುಂದಾಗಿದೆ.

ಜಾಗತಿಕ ತೈಲ ವ್ಯಾಪಾರದಲ್ಲಿ ಸಾಗಣೆಯ ವೇಳೆ ಹಡಗಿನ ಗಮ್ಯಸ್ಥಾನಗಳಲ್ಲಿನ ಬದಲಾವಣೆಗಳು ಸಾಮಾನ್ಯ ಎಂದಿರುವ ಸಚಿವಾಲಯ, ಸರಕು ಸಾಗಣೆಯ ಬಿಲ್‌ಗಳು ಸಾಮಾನ್ಯವಾಗಿ ತಾತ್ಕಾಲಿಕ ವಿಸರ್ಜನಾ ಬಂದರುಗಳನ್ನು ಸೂಚಿಸುತ್ತವೆ. ಕಾರ್ಯಾಚರಣೆ ಮತ್ತು ವಾಣಿಜ್ಯ ಕಾರಣಗಳಿಗಾಗಿ ಸರಕುಗಳನ್ನು ಪ್ರಯಾಣದ ನಡುವೆಯೇ ಮಾರ್ಗ ಬದಲಿಸಲಿವೆ ಎಂದಿದೆ.

44 ಸಾವಿರ ಟನ್ ಔಕಿಎ ಹೊತ್ತ ಹಡಗಾದ ಸೀ ಬರ್ಡ್ ಏಪ್ರಿಲ್ 2 ರಂದು ಕರ್ನಾಟಕದ ಮಂಗಳೂರಿಗೆ ಬಂದಿದೆ. ಇದರಿಂದ ಮುಂದಿನ ತಿಂಗಳವರೆಗೆ ದೇಶದಲ್ಲಿ ಯಾವುದೇ ಇಂಧನ ಕೊರತೆ ಉಂಟಾಗುದಿಲ್ಲ. ಪ್ರಸ್ತುತ ಎಲ್‌ಪಿಜಿಯನ್ನು ಎಲ್ಲ ಕಡೆಗೂ ಸರಬರಾಜು ಮಾಡಲಾಗುತ್ತಿದೆ ಎಂದು ಸಚಿವಾಲಯ ತಿಳಿಸಿದೆ.

# ಶಿರಸಿ ಬಳಿ ಭೀಕರ ಅಪಘಾತ: ಎರಡು ಬಸ್‌ಗಳು ಮುಖಾಮುಖಿ ಡಿಕ್ಕಿ, 40ಕ್ಕೂ ಹೆಚ್ಚು ಜನರಿಗೆ ಗಾಯ



**ಶಿರಸಿ (ಉತ್ತರ ಕನ್ನಡ),ಏ.4**-ಉತ್ತರ ಕನ್ನಡ ಜಿಲ್ಲೆಯ ಶಿರಸಿ ಸಮೀಪ ಶುಕ್ರವಾರ ಮಧ್ಯಾಹ್ನ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಕನಿಷ್ಠ 40 ಮಂದಿ ಗಾಯಗೊಂಡಿದ್ದಾರೆ. ಕುಮಟಾಶಿರಸಿ ಹೆದ್ದಾರಿಯ ಕೊಲಗಿಬೀಸ್ ಗ್ರಾಮದಲ್ಲಿ ಬಳಿ ವೇಗವಾಗಿ ಸಂಚರಿಸುತ್ತಿದ್ದ ಎರಡು ಬಸ್‌ಗಳು ಮುಖಾಮುಖಿ ಡಿಕ್ಕಿಯಾಗಿವೆ.

ಪೊಲೀಸರು ನೀಡಿದ ಮಾಹಿತಿಯ ಪ್ರಕಾರ, ಕುಮಟಾದಿಂದ ಶಿರಸಿಗೆ ತೆರಳುತ್ತಿದ್ದ ಖಾಸಗಿ ಬಸ್ ಮತ್ತು ಭಟ್ಕಳದಿಂದ ಬಾಗಲಕೋಟೆಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ನಡುವೆ ಈ ಅಪಘಾತ ಸಂಭವಿಸಿದೆ ಎಂದು ತಿಳಿದುಬಂದಿದೆ.

ಅಪಘಾತದ ತೀವ್ರತೆ ಸ್ಥಳೀಯ ನಿವಾಸಿಗಳನ್ನು ಬೆಚ್ಚಿಬೀಳಿಸಿದೆ, ಎರಡೂ ಬಸ್‌ಗಳ ಮುಂಭಾಗ ಸಂಪೂರ್ಣವಾಗಿ ಜಖಂಗೊಂಡಿದ್ದು, ಭಾರೀ ಸದ್ದು ಕೇಳುತ್ತಿದ್ದಂತೆ ಸ್ಥಳೀಯರು ಮನೆಯಿಂದ ಹೊರಗೆ ಓಡಿ ಬಂದಿದ್ದಾರೆ. ಸ್ಥಳದಲ್ಲಿ ಗಾಯಗೊಂಡವರ ಗೋಳಾಟ, ಕಿರುಚಾಟ ಮತ್ತು ಸಹಾಯಕ್ಕಾಗಿ ಕೂಗುತ್ತಿರುವುದು ಕಂಡು ಕೂಡಲೇ ರಕ್ಷಣೆಗೆ ಧಾವಿಸಿದ್ದಾರೆ.ಶಿರಸಿ ಪೊಲೀಸರು ಸ್ಥಳಕ್ಕೆ ತ್ವರಿತವಾಗಿ ತಲುಪಿ ಆಂಬ್ಯುಲೆನ್ಸ್‌ಗಳಿಗೆ ವ್ಯವಸ್ಥೆ ಮಾಡಿದರು ಎಂದು ಪ್ರತ್ಯಕ್ಷದರ್ಶಿ ಮಂಜುನಾಥ್ ನಾಯಕ್ ಅವರು ಹೇಳಿದ್ದಾರೆ.

ಈ ಅಪಘಾತದಿಂದ ಹೊಸದಾಗಿ ನಿರ್ಮಿತ ರಸ್ತೆಯಲ್ಲಿ ಸಂಚಾರಕ್ಕೆ ಭಾರೀ ಅಡಚಣೆ ಉಂಟಾಗಿ, ಹಲವು ಕಿಲೋಮೀಟರ್‌ಗಳಷ್ಟು ವಾಹನಗಳು ಸಾಲಾಗಿ ನಿಂತಿದ್ದವು. ನಂತರ ಅಪಘಾತಕ್ಕೀಡಾದ ಬಸ್‌ಗಳನ್ನು ರಸ್ತೆ ಬದಿಗೆ ಸರಿಸಲಾಯಿತು. ಬಳಿಕ ಸಂಚಾರ ಸುಗಮಗೊಂಡಿತು.

ಶಿರಸಿ ಉಪವಿಭಾಗ ಪೊಲೀಸ್ ಅಧಿಕಾರಿ ಗೀತಾ ಪಾಟೀಲ್ ಮಾಹಿತಿ ನೀಡಿ, ಅಪಘಾತದ ನಿಖರ ಕಾರಣ ತನಿಖೆಯ ಬಳಿಕ ತಿಳಿಯಲಿದೆ. ವೇಗವೇ ಕಾರಣವಾಗಿರಬಹುದು ಎಂಬ ಅನುಮಾನವಿದೆ. ಪ್ರಕರಣ ದಾಖಲಿಸಿ ತನಿಖೆ ಆರಂಭಿಸಲಾಗುತ್ತದೆ ಎಂದು ಹೇಳಿದ್ದಾರೆ.

# ತುಮಕೂರು: ಹೊಸ ಬಡಾವಣೆ ಪೊಲೀಸ್ ಠಾಣೆಯ ಮಹಿಳಾ ಪಿಎಸ್‌ಐ ನಾಪತ್ತೆ ಮಗಳಿಂದ ದೂರು ದಾಖಲು

**ತುಮಕೂರು,ಏ.4**-ತುಮಕೂರಿನ ಹೊಸ ಬಡಾವಣೆ ಪೊಲೀಸ್ ಠಾಣೆಯ ಪಿಎಸ್‌ಐ ಮಂಗಳಮ್ಮ ಅವರು ಕಾಣೆಯಾಗಿದ್ದಾರೆ.



ಪಿಎಸ್‌ಐ ಮಂಗಳಮ್ಮ ಅವರಿಗಾಗಿ ತೀವ್ರ ಹುಡುಕಾಟ ನಡೆಸಿದ ಮಗಳು, ಪತ್ತೆಯಾಗದಿದ್ದಾಗ ಹೊಸ ಬಡಾವಣೆ ಠಾಣೆಗೆ ತೆರಳಿ, ತಾಯಿ, ನಾಪತ್ತೆಯಾದ ಬಗ್ಗೆ ದೂರು ದಾಖಲಿಸಿದ್ದಾರೆ.

ಏಪ್ರಿಲ್ 3 ರಂದು ಡಿವೈಎಸ್‌ಪಿ ಕಚೇರಿಯಲ್ಲಿ ಸಭೆಗೆ ಮಂಗಳಮ್ಮ ಬಂದಿದ್ದರು. ಈ ವೇಳೆ ಮನೆಯಿಂದ ಕರೆ ಬಂದಿತ್ತು. ಬಳಿಕ ಅಲ್ಲಿಂದ ಠಾಣೆಗೆ ತೆರಳಿ, ಸಮವಸ್ತ್ರ ಬದಲಿಸಿ, ಸಿವಿಲ್ ಡ್ರೆಸ್‌ನಲ್ಲಿ ಹೊರಗೆ ತೆರಳಿದ್ದರು. ಬಳಿಕ ಅವರು ಯಾರ ಸಂಪರ್ಕಕ್ಕೂ ಸಿಕ್ಕಿಲ್ಲ. ಇದರಿಂದ ಆತಂಕಗೊಂಡ ಮಗಳು, ಪೊಲೀಸರಿಗೆ ದೂರು ನೀಡಿದ್ದಾರೆ.

ಇತ್ತೀಚೆಗಷ್ಟೇ ಮಂಗಳಮ್ಮ ಅವರ ಪುತ್ರಿಗೆ ಡಿವೋರ್ಸ್ ಆಗಿತ್ತು. ಕೆಲ ದಿನಗಳಿಂದ ತಾಯಿ, ಮಗಳು ಒಟ್ಟಿಗೆ ವಾಸವಿದ್ದರು. ಕೌಟುಂಬಿಕ ಕಲಹ ಹಿನ್ನೆಲೆ, ಮನನೊಂದು ಮನೆ ಬಿಟ್ಟು ಹೋಗಿರುವ ಶಂಕೆ ವ್ಯಕ್ತವಾಗಿದೆ.

ನಾಪತ್ತೆಯಾದ ಪಿಎಸ್‌ಐಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

OWNER, PUBLISHER, PRINTER BY: SHYAM SUNDER L. PUBLISHED FROM: H: NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA AND PRINTED AT: KANNADA MATHRUBHOOMI PRINTERS, SHOP NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA, EDITOR BY: SHYAM SUNDER L